ಸಂಪುಟ 01 । ಸಂಚಿಕೆ 237 ಭಾನುವಾರ 01 ನವೆಂಬರ್ 2026 । ಪುಟ 4 । ಬೆಲೆ–2 ರೂ.

Posting registration number : RCR/RNP/116/2026-2028

ಇರ್ಫಾನ್ ಕೆ
ಸಂಪಾದಕರು

MA ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಸಿಂಧನೂರು, ಮಸ್ಕಿ
ಮಾನ್ವಿ, ಅಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

1)ಕನ್ನಡ ರಾಜ್ಯೋತ್ಸವ (Kannada Rajyotsava)
ಕರ್ನಾಟಕ ರಾಜ್ಯೋತ್ಸವವನ್ನು ಪ್ರತಿವರ್ಷ ನವೆಂಬರ್ 1ರಂದು ಆಚರಿಸಲಾಗುತ್ತದೆ.
1956ರ ನವೆಂಬರ್ 1ರಂದು ಕನ್ನಡ ಮಾತನಾಡುವ ಪ್ರದೇಶಗಳನ್ನು ಒಗ್ಗೂಡಿಸಿ ಮೈಸೂರು ರಾಜ್ಯವನ್ನು ರಚಿಸಲಾಯಿತು.

2)ವಿಶ್ವ ಸಸ್ಯಾಹಾರ ದಿನ (World Vegan Day)
ಪ್ರತಿವರ್ಷ ನವೆಂಬರ್ 1ರಂದು ಆಚರಿಸಲಾಗುತ್ತದೆ.
ಸಸ್ಯಾಹಾರ ಮತ್ತು ಪ್ರಾಣಿಗಳ ಕಲ್ಯಾಣದ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶ ಹೊಂದಿದೆ.

3)ಆಲ್ ಸೇಂಟ್ಸ್ ಡೇ (All Saints' Day)
ಕ್ರೈಸ್ತ ಧರ್ಮದ ಪ್ರಮುಖ ಆಚರಣೆ.
ಇತಿಹಾಸದ ಎಲ್ಲಾ ಸಂತರು ಮತ್ತು ಧಾರ್ಮಿಕ ಮಹನೀಯರನ್ನು ಸ್ಮರಿಸುವ ದಿನ.

4)ಹರಿಯಾಣ ದಿನ (Haryana Day)
1966ರ ನವೆಂಬರ್ 1ರಂದು ಹರಿಯಾಣ ರಾಜ್ಯ ರಚನೆಯಾಯಿತು.
ಈ ದಿನವನ್ನು ಹರಿಯಾಣ ರಾಜ್ಯ ಸ್ಥಾಪನಾ ದಿನವಾಗಿ ಆಚರಿಸಲಾಗುತ್ತದೆ.

5)ಕೇರಳ ಪಿರವಿ (Kerala Piravi)
ಕೇರಳ ರಾಜ್ಯದ ಸ್ಥಾಪನಾ ದಿನ.
1956ರ ನವೆಂಬರ್ 1ರಂದು ಕೇರಳ ರಾಜ್ಯ ರಚನೆಯಾಯಿತು.

ಸುಭಾಷಿತ

ಶಕ್ತಿ ಮಾನವನಲ್ಲೇ ಇರುವಂಥದು. ವ್ಯಕ್ತಿಯ ಗುರಿ ಸಾಧನೆಗೆ ಅದು ಪ್ರಚೋದಕ.

ಎ.ಪಿ.ಜೆ. ಅಬ್ದುಲ್ ಕಲಾಂ

ನ.3 ಕ್ಕೆ ತಾಲೂಕ ಪಂಚಾಯತ ಸಾಮಾನ್ಯ ಸಭೆ

ನೈಜ್ಯ ದೆಸೆ ನ್ಯೂಸ್

ತಾಳಿಕೋಟೆ:ಅಕ್ಟೋಬರ್ 30ರಂದು ನಡೆಯಬೇಕಾಗಿದ್ದ ತಾಳಿಕೋಟಿ ತಾಲೂಕ ಪಂಚಾಯತ ಸಾಮಾನ್ಯ ಸಭೆಯನ್ನು ಮರು ನಿಗಧಿ ಪಡಿಸಿ ದಿನಾಂಕ 3–11–2026 ಮಂಗಳವಾರ ರಂದು ಹಮ್ಮಿಕೊಳ್ಳಲಾಗಿದೆ.

ಅಂದು ಮುಂಜಾನೆ 11:00 ಘಂಟೆಗೆ ತಾಲೂಕು ಪಂಚಾಯತ ಸಭಾ ಭವನದಲ್ಲಿ ನಡೆಯಲಿರುವ ಈ ಸಭೆಯಲ್ಲಿ,1. ತಾಲೂಕಿನ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ, 2026–27 ನೇ ಸಾಲಿನ ತಾಲೂಕು ಪಂಚಾಯತ ಮಾಸಿಕ ಲೆಕ್ಕಪತ್ರಗಳಿಗೆ ಅನುಮೋದನೆ ನೀಡುವುದು. 2026–27 ನೇ ಸಾಲಿನ ತಾಪಂ ಅನಿರ್ಬಂಧಿತ ಅನುದಾನದ ಕ್ರಿಯಾಯೋಜನೆಗೆ ಅನುಮೋದನೆ ಪಡೆದುಕೊಳ್ಳುವುದು ಹಾಗೂ ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳನ್ನು ಚರ್ಚಿಸುವುದು. ಸದರಿ ಸಭೆಗೆ ಎಲ್ಲ ಇಲಾಖೆಗಳ ತಾಲೂಕ ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಹಾಜರಾಗಬೇಕು ಎಂದು ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಅನಸೂಯಾ ಚಲವಾದಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಲ್ಲಾ ತಲೆನೋವುಗಳೂ ಮೈಗ್ರೇನ್ ಆಗಿರುವುದಿಲ್ಲ ಡಾ. ಅನುಪಮಾ

ಸನ್ ರೈಸ್ ಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಆರೋಗ್ಯ ಜಾಗೃತಿ ಮೂಡಿಸಿದ ಶನಿವಾರದ ವಿಶೇಷ ಉಪನ್ಯಾಸ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ವಿದ್ಯಾರ್ಥಿಗಳಲ್ಲಿ ವೈದ್ಯಕೀಯ ಜ್ಞಾನ, ಆರೋಗ್ಯದ ಅರಿವು ಹಾಗೂ ವೃತ್ತಿಪರ ಕೌಶಲ್ಯಗಳನ್ನು ವೃದ್ಧಿಸುವ ಉದ್ದೇಶದಿಂದ ಸನ್ ರೈಸ್ ಡಿ–ಫಾರ್ಮಸಿ, ನರ್ಸಿಂಗ್ ಹಾಗೂ ಪ್ಯಾರಾ ಮೆಡಿಕಲ್ ಕಾಲೇಜು ಸಿಂಧನೂರು ವತಿಯಿಂದ ಪ್ರತೀ ಶನಿವಾರ ಆಯೋಜಿಸಲಾಗುತ್ತಿರುವ ವಿಶೇಷ ಉಪನ್ಯಾಸ ಕಾರ್ಯಕ್ರಮದ ಅಂಗವಾಗಿ ಅಕ್ಟೋಬರ್ 31ರ ಶನಿವಾರದಂದು ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಕಾಲೇಜಿನಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮ ಜರುಗಿತು.

ಕಾರ್ಯಕ್ರಮಕ್ಕೆ ಸಿಂಧನೂರಿನ ಅಮೃತೇಶ್ವರ ಆಯುರ್ವೇದ ಆಸ್ಪತ್ರೆಯ ಖ್ಯಾತ ಆಯುರ್ವೇದ ತಜ್ಞರಾದ ಡಾ. ಅನುಪಮಾ (BAMS, MD) ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ, "ಎಲ್ಲಾ ತಲೆನೋವುಗಳೂ ಮೈಗ್ರೇನ್ ಆಗಿರುವುದಿಲ್ಲ" ಎಂಬ ಮಹತ್ವದ ವಿಷಯದ ಕುರಿತು ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸ ನೀಡಿದರು.

ಉಪನ್ಯಾಸದಲ್ಲಿ ಮಾತನಾಡಿದ ಅವರು, ತಲೆನೋವಿನ ವಿವಿಧ ವಿಧಗಳು, ಮೈಗ್ರೇನ್‌ನ ಲಕ್ಷಣಗಳು, ಸಾಮಾನ್ಯ ತಲೆನೋವು ಮತ್ತು ಮೈಗ್ರೇನ್ ನಡುವಿನ ವ್ಯತ್ಯಾಸ, ತಲೆನೋವು ಉಂಟಾಗಲು ಕಾರಣವಾಗುವ ಅಂಶಗಳು ಹಾಗೂ ಆರೋಗ್ಯಕರ ಜೀವನಶೈಲಿಯ ಮಹತ್ವದ ಕುರಿತು ಸವಿಸ್ತಾರವಾಗಿ ವಿವರಿಸಿದರು. ಪ್ರತಿಯೊಂದು ತಲೆನೋವನ್ನೂ ಮೈಗ್ರೇನ್ ಎಂದು ಭಾವಿಸುವುದು ಸರಿಯಲ್ಲ. ತಲೆನೋವಿನ ಲಕ್ಷಣಗಳು, ತೀವ್ರತೆ ಹಾಗೂ ಅದರ ಹಿಂದಿರುವ ಕಾರಣಗಳನ್ನು ಗುರುತಿಸುವುದು ಮುಖ್ಯ. ಸಮಯಕ್ಕೆ ಸರಿಯಾಗಿ ವೈದ್ಯಕೀಯ ಸಲಹೆ ಮತ್ತು ಸೂಕ್ತ ಚಿಕಿತ್ಸೆ





ಪಡೆಯುವುದರಿಂದ ಆರೋಗ್ಯ ಸಮಸ್ಯೆಗಳನ್ನು ನಿಯಂತ್ರಿಸಲು ಸಾಧ್ಯ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ನರ್ಸಿಂಗ್ ವೃತ್ತಿಯ ಮಹತ್ವದ ಕುರಿತು ಮಾತನಾಡಿದ ಅವರು, ವೈದ್ಯಕೀಯ ಕ್ಷೇತ್ರದಲ್ಲಿ ನರ್ಸ್‌ಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ರೋಗಿಗಳ ಆರೈಕೆ, ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದು, ರೋಗಿಗಳಿಗೆ ಮಾನಸಿಕ ಧೈರ್ಯ ತುಂಬುವುದು ಹಾಗೂ ಸೇವಾ ಮನೋಭಾವದಿಂದ ಕರ್ತವ್ಯ ನಿರ್ವಹಿಸುವುದು ನರ್ಸಿಂಗ್ ವೃತ್ತಿಯ ಪ್ರಮುಖ ಜವಾಬ್ದಾರಿಗಳಾಗಿವೆ ಎಂದು ಹೇಳಿದರು. ವಿದ್ಯಾರ್ಥಿಗಳು ಕೇವಲ ಪಠ್ಯಪುಸ್ತಕದ ಜ್ಞಾನಕ್ಕೆ ಸೀಮಿತವಾಗದೆ ಪ್ರಾಯೋಗಿಕ ಜ್ಞಾನ, ಸಂವಹನ ಕೌಶಲ್ಯ, ಶಿಸ್ತು, ತಾಳ್ಮೆ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ಆತ್ಮವಿಶ್ವಾಸದಿಂದ ಮುನ್ನಡೆದು ಉತ್ತಮ ಆರೋಗ್ಯ ಸೇವಕರಾಗಿ ಸಮಾಜಕ್ಕೆ ಕೊಡುಗೆ ನೀಡಬೇಕು ಎಂದು ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಿದರು.

ಕಾರ್ಯಕ್ರಮದ ಸಂದರ್ಭದಲ್ಲಿ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಕಾಲೇಜಿನ ಉಪನ್ಯಾಸಕರಾದ ವೀರೇಶ್ ಅವರು ಮಾತನಾಡಿ, ಇಂದಿನ ದಿನದ ವಿಶೇಷ ಉಪನ್ಯಾಸದ ಮೂಲಕ ವಿದ್ಯಾರ್ಥಿಗಳಿಗೆ ಆರೋಗ್ಯದ ಕುರಿತು ಮಹತ್ವದ ಮಾಹಿತಿಯನ್ನು ನೀಡುವುದರ ಜೊತೆಗೆ ನರ್ಸಿಂಗ್ ವೃತ್ತಿಯ ಜವಾಬ್ದಾರಿ ಮತ್ತು ಮಹತ್ವವನ್ನು ತಿಳಿಸಿಕೊಟ್ಟ ಡಾ. ಅನುಪಮಾ ಅವರಿಗೆ ಸಂಸ್ಥೆಯ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಿದರು.

ಮುಂದುವರಿದು, ಸಂಸ್ಥೆಯ ಅಧ್ಯಕ್ಷರಾದ ಇರ್ಫಾನ್ ಕೆ, ಕಾರ್ಯದರ್ಶಿಗಳಾದ ಇರ್ಷಾದ್ ಕೆ, ಎಲ್ಲಾ ವಿಭಾಗಗಳ ಪ್ರಾಚಾರ್ಯರು, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳ ಪರವಾಗಿ ಡಾ. ಅನುಪಮಾ ಅವರಿಗೆ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸಿದರು. ಇಂತಹ ತಜ್ಞರ ಉಪನ್ಯಾಸಗಳು ವಿದ್ಯಾರ್ಥಿಗಳ ಜ್ಞಾನವನ್ನು ವೃದ್ಧಿಸುವುದರ ಜೊತೆಗೆ ಭವಿಷ್ಯದಲ್ಲಿ ಉತ್ತಮ ವೈದ್ಯಕೀಯ ಮತ್ತು ಆರೋಗ್ಯ ಸೇವೆ ಸಲ್ಲಿಸಲು ಪ್ರೇರಣೆ ನೀಡುತ್ತವೆ ಎಂದು ಅಭಿಪ್ರಾಯಪಟ್ಟರು.

ಸನ್ ರೈಸ್ ಸಂಸ್ಥೆಯು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಆದ್ಯತೆ ನೀಡುತ್ತಾ ಪ್ರತೀ ಶನಿವಾರ ವಿವಿಧ ಕ್ಷೇತ್ರಗಳ ತಜ್ಞರನ್ನು ಆಹ್ವಾನಿಸಿ ವಿಶೇಷ ಉಪನ್ಯಾಸ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಇಂತಹ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳಿಗೆ ಪಠ್ಯಜ್ಞಾನದ ಜೊತೆಗೆ ವೈದ್ಯಕೀಯ ಕ್ಷೇತ್ರದ ಪ್ರಾಯೋಗಿಕ ಅನುಭವ, ಹೊಸ ವಿಚಾರಗಳ ಅರಿವು, ವೃತ್ತಿಪರ ಕೌಶಲ್ಯ ಹಾಗೂ ಆತ್ಮವಿಶ್ವಾಸವನ್ನು ಬೆಳೆಸುವ ನಿರಂತರ ಪ್ರಯತ್ನ ಮಾಡಲಾಗುತ್ತಿದೆ.





ಎಮ್ಮಿಗನೂರು: ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ಸಂಜೀವಿನಿ ಆಸ್ಪತ್ರೆ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ

ನೈಜ್ಯ ದೆಸೆ ನ್ಯೂಸ್

ಕಂಪ್ಲಿ: ತಾಲೂಕಿನ ಸಮೀಪದ ಎಮ್ಮಿಗನೂರು ಗ್ರಾಮದ ಕೋಟೆ ಆಂಜನೇಯ ದೇವಸ್ಥಾನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಕಂಪ್ಲಿ ಹಾಗೂ ಸಂಜೀವಿನಿ ಮಲ್ಟಿ ಸ್ಪೆಷಲಿಸ್ಟ್ ಆಸ್ಪತ್ರೆಯ ಸಂಯುಕ್ತ ಆಶ್ರಯದಲ್ಲಿ ಜ್ಞಾನವಿಕಾಸ ಕಾರ್ಯಕ್ರಮದ ಅಡಿ ಹಮ್ಮಿಕೊಳ್ಳಲಾಗಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರವು ಯಶಸ್ವಿಯಾಗಿ ಜರಗಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಪ್ರಸಿದ್ಧ ಹೃದಯ ತಜ್ಞರಾದ ಡಾ. ಕೃಷ್ಣಕುಮಾರ್ ಅವರು, "ನಮ್ಮ ಆರೋಗ್ಯ ನಮ್ಮ ಕೈಯಲ್ಲಿದೆ. ಪ್ರತಿಯೊಬ್ಬರೂ ಪ್ರತಿನಿತ್ಯ ಸಮತೋಲಿತ ಆಹಾರ ಸೇವನೆ ಮಾಡುವ ಮೂಲಕ ದೇಹದ ವಿವಿಧ ಅಂಗಾಂಗಗಳನ್ನು ಕಾಪಾಡಿಕೊಂಡು ಆರೋಗ್ಯವಂತರಾಗಿ ಬಾಳಬೇಕು," ಎಂದು ಕರೆ ನೀಡಿದರು. ಬಳಿಕ ಮಾತನಾಡಿದ ವೈದ್ಯರಾದ ಡಾ. ವೆಂಕಟೇಶ್ ಬರಮಕ್ಕನವರ್ ಅವರು,



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಗ್ರಾಮೀಣ ಭಾಗದಲ್ಲಿ ಹಲವಾರು ಸಮಾಜಮುಖಿ ಮತ್ತು ಜನೋಪಕಾರಿ ಕಾರ್ಯಗಳನ್ನು ನಿರಂತರವಾಗಿ ಮಾಡುತ್ತಿರುವುದು ಅತ್ಯಂತ ಸಂತಸದ ವಿಚಾರವಾಗಿದೆ ಎಂದು ಶ್ಲಾಘಿಸಿದರು.

170 ಜನರಿಗೆ ತಪಾಸಣೆ: ಈ ಜನಸ್ನೇಹಿ ಆರೋಗ್ಯ ತಪಾಸಣಾ ಶಿಬಿರದಲ್ಲಿ ಗ್ರಾಮದ ಹಾಗೂ ಸುತ್ತಮುತ್ತಲಿನ ಸುಮಾರು 170ಕ್ಕೂ ಹೆಚ್ಚು ಸಾರ್ವಜನಿಕರು ಭಾಗವಹಿಸಿ ಆರೋಗ್ಯ ಲಾಭ ಪಡೆದರು. ಶಿಬಿರದಲ್ಲಿ ಪ್ರಮುಖವಾಗಿ ರಕ್ತದೊತ್ತಡ (ಬಿಪಿ), ಮಧುಮೇಹ (ಶುಗರ್) ಹಾಗೂ ಇಸಿಜಿ (ಇಅಳು) ಸೇರಿದಂತೆ ವಿವಿಧ ಆರೋಗ್ಯ ತಪಾಸಣೆಗಳನ್ನು ನಡೆಸಿ, ಅಗತ್ಯ ಸಲಹೆಗಳನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಗ್ರಾಮದ ಪ್ರಮುಖರಾದ ಬಿ. ಸದಾಶಿವಪ್ಪ ಧನಿ, ವೈ. ಅಶ್ವತ್ ರೆಡ್ಡಿ, ಶಾರದಾ ಜಡೆಮೂರ್ತಿ, ಮಂಜುನಾಥ್, ತಾಲೂಕು ಸಮನ್ವಯ ಅಧಿಕಾರಿಯಾದ ಮಂಜುಳಾ, ಸಂಪನ್ಮೂಲ ವ್ಯಕ್ತಿ ಹಾಗೂ ಶಿಕ್ಷಕರಾದ ಎಸ್. ರಾಮಪ್ಪ, ಸೇವಾ ಪ್ರತಿನಿಧಿಗಳಾದ ಲಕ್ಷ್ಮಿ, ಶಾಹಿದ, ಉಮಾ, ಸುಮಲತಾ, ಶಶಿಕುಮಾರ್ ಹಾಗೂ ಬನಶಂಕರಿ ಜ್ಯೋತಿ ಮಹಿಳಾ ಸಂಘದ ಸದಸ್ಯರು ಸೇರಿದಂತೆ ಗ್ರಾಮದ ಹಿರಿಯರು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

ಸುತ್ತೂರು ಮಠದ ಶ್ರೀ ಶಿವರಾತ್ರಿಶ್ವರ ಮಾಧ್ಯಮ ಪ್ರಶಸ್ತಿ ಪುರಸ್ಕೃತ ಗ್ರಾಮೀಣ ಪತ್ರಕರ್ತ ಟಿಕೆ ಬಸವರಾಜು ರವರಿಗೆ ಸನ್ಮಾನ

ನೈಜ್ಯ ದೆಸೆ ನ್ಯೂಸ್

ತಾಂಡವಪುರ: ಸುತ್ತೂರು ಮಠದ ಶ್ರೀ ಶಿವರಾತ್ರಿಶ್ವರ ಮಾಧ್ಯಮ ಪ್ರಶಸ್ತಿ ಪುರಸ್ಕೃತ ನಂಜನಗೂಡು ತಾಲೂಕು ಚಿಕ್ಕಯ್ಯನ ಛತ್ರ ಹೋಬಳಿ ವರುಣ ವಿಧಾನಸಭಾ ಕ್ಷೇತ್ರಕ್ಕೆ ಸೇರುವ ಗ್ರಾಮೀಣ ಪತ್ರಕರ್ತ ತಾಂಡವಪುರ ಟಿಕೆ ಬಸವರಾಜ ಅವರನ್ನು ತಾಂಡವಪುರ ಗ್ರಾಮದ ಹಾಲು ಉತ್ಪಾದಕರ ಸಹಕಾರದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು ನನ್ನನ್ನು ಈ ಬಾರಿಯ ಸುತ್ತೂರು ಶ್ರೀಮಠದ ಶಿವರಾತೇಶ್ವರ ದೇಸಿ ಕೇಂದ್ರ ಮಹಾಸ್ವಾಮಿಜಿಯವರ

ಮಾಧ್ಯಮ ಪ್ರಶಸ್ತಿಗೆ ಆಯ್ಕೆ ಮಾಡಲು ಕಾರಣಕರ್ತರಾದ ನಂಜನಗೂಡು ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಹಾಗೂ ಸದಸ್ಯರುಗಳನ್ನು ನಾನು ತುಂಬು ಹೃದಯದಿಂದ ಅಭಿನಂದನೆ ಸಲ್ಲಿಸುತ್ತೇನೆ ಹಾಗೂ ಸುತ್ತೂರು ಶ್ರೀಮಂತ ಮಾಧ್ಯಮ ಪ್ರಶಸ್ತಿ ನೀಡಿದ ಸುತ್ತೂರು ಶ್ರೀಮಠಕ್ಕೆ



ಸುತ್ತೂರು ಶ್ರೀ ಮಠದ ಜಗದ್ಗುರು ಶ್ರೀ ಶಿವರಾತ್ರಿಶ್ವರ ದೇಸಿ ಕೇಂದ್ರ ಮಹಾಸ್ವಾಮಿಜಿಯವರ ಪಾದಗಳಿಗೆ ನಮಸ್ಕರಿಸುತ್ತಾ ನಾನು ಸುತ್ತೂರು ಶ್ರೀಮಠ ಹಾಗೂ ನಮ್ಮ ನಂಜನಗೂಡು ತಾಲೂಕು ಪತ್ರಕರ್ತರ ಸಂಘದ ಎಲ್ಲ ಸದಸ್ಯರಿಗೂ ಹಾಗೂ ತಾಂಡವಪುರ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರು ಉಪಾಧ್ಯಕ್ಷರು ಹಾಗೂ ಸದಸ್ಯರು ಎಲ್ಲರಿಗೂ ಆಭಾರಿಯಾಗಿದ್ದೇನೆ ಎಂದು ಸುತ್ತೂರು ಶ್ರೀಮಠದ ಶಿವರಾತ್ರಿಶ್ವರ ಮಾಧ್ಯಮ ಪ್ರಶಸ್ತಿ ಪುರಸ್ಕೃತ ಗ್ರಾಮೀಣ ಪತ್ರಕರ್ತ ಟೀಕೆ ಬಸವರಾಜು ರವರು ಹೇಳಿದರು ಈ ಸಂದರ್ಭದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾದ ಟಿಪಿ ಮಹೇಶ್ ಉಪಾಧ್ಯಕ್ಷ ಮಾಲಯ್ಯ ಮಾಜಿ ಅಧ್ಯಕ್ಷರಾದ ಪ್ರಕಾಶ್ ಮಹದೇವು ಶಿವಯ್ಯ ನಾಗರಾಜುಕೆಂಪಣ್ಣ ಸಂಘದ ಕಾರ್ಯದರ್ಶಿ, ರಾಧಾ ಹಾಗೂ ಮುಂತಾದವರು ಈ ಸಂದರ್ಭದಲ್ಲಿ ಹಾಜರಿದ್ದರು

ಕಂಪ್ಲಿಯಲ್ಲಿ ಕನ್ನಡ ಜ್ಯೋತಿಗೆ ಭವ್ಯ ಸ್ವಾಗತ: ಕರವೇ ಕಾರ್ಯಕರ್ತರ ಸಡಗರ

ನೈಜ್ಯ ದೆಸೆ ನ್ಯೂಸ್

ಕಂಪ್ಲಿ: ಕನ್ನಡ ರಾಜ್ಯೋತ್ಸವದ ಅಂಗವಾಗಿ ಹಂಪಿಯ ಹೇಮಕೂಟದ ಭುವನೇಶ್ವರಿ ದೇವಸ್ಥಾನದಿಂದ ಬಳ್ಳಾರಿಗೆ ಸಾಗುತ್ತಿದ್ದ ಭುವನೇಶ್ವರಿ ಜ್ಯೋತಿಯನ್ನು ಶನಿವಾರ ಇಲ್ಲಿನ ಕರ್ನಾಟಕ ರಕ್ಷಣಾ ವೇದಿಕೆ (ಟಿ.ಎ. ನಾರಾಯಣಗೌಡ ಬಣ) ತಾಲೂಕು ಘಟಕದ ವತಿಯಿಂದ ಅತ್ಯಂತ ಸಡಗರ ಹಾಗೂ ಸಂಭ್ರಮದಿಂದ ಬರಮಾಡಿಕೊಳ್ಳಲಾಯಿತು.



ರಾಜ್ಯ ಉಪಾಧ್ಯಕ್ಷ ಚಾನಾಳ್ ಶೇಖರ ಹಾಗೂ ಬಳ್ಳಾರಿ ಜಿಲ್ಲಾಧ್ಯಕ್ಷ ಅಂಗಡಿ ಶಂಕರ ಅವರ ಆದೇಶದ ಮೇರೆಗೆ ಹಮ್ಮಿಕೊಳ್ಳಲಾಗಿದ್ದ ಈ ಜ್ಯೋತಿ ಯಾತ್ರೆಯು, ತಾಲೂಕಿನ ನಂ. 10 ಮುದ್ದಾಪುರ ಗ್ರಾಮದ ಮಾರ್ಗವಾಗಿ ಕಂಪ್ಲಿ ನಗರವನ್ನು ಪ್ರವೇಶಿಸಿತು. ನಗರದ ಶ್ರೀ ಉದ್ಭವ ಮಹಾಗಣಪತಿ ದೇವಸ್ಥಾನದಿಂದ ಆರಂಭವಾದ ಜ್ಯೋತಿಯ ಭವ್ಯ ಮೆರವಣಿಗೆಯು ಪ್ರಮುಖ ರಸ್ತೆಗಳ ಮೂಲಕ ಸಾಗಿ ಡಾ. ಬಿ. ಆರ್. ಅಂಬೇಡ್ಕರ್ ಸರ್ಕಲ್ ತಲುಪಿತು. ಮೆರವಣಿಗೆಯುದ್ದಕ್ಕೂ ಕರವೇ ಕಾರ್ಯಕರ್ತರು ಕನ್ನಡದ ಹಳದಿ–ಕೆಂಪು ಧ್ವಜ ಹಾಗೂ ಶಾಲುಗಳನ್ನು ಧರಿಸಿ, ಜೈ ಭುವನೇಶ್ವರಿ, ಕನ್ನಡ ಮಾತೆ ಭುವನೇಶ್ವರಿಗೆ ಜಯವಾಗಲಿ ಎಂಬ ಘೋಷಣೆಗಳನ್ನು ಕೂಗುತ್ತಾ ಜ್ಯೋತಿಯನ್ನು ಬರಮಾಡಿಕೊಂಡರು. ಅಂಬೇಡ್ಕರ್ ವೃತ್ತದಲ್ಲಿ ಜ್ಯೋತಿಯನ್ನು ಕೈಯಲ್ಲಿ ಹಿಡಿದು ಸಂಘಟನೆಯ ಪದಾಧಿಕಾರಿಗಳು ಹೆಮ್ಮೆಯಿಂದ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಕರವೇ ಕಂಪ್ಲಿ ತಾಲೂಕು ಅಧ್ಯಕ್ಷ ಬಳೆ ಮಲ್ಲಿಕಾರ್ಜುನ, ತಾಲೂಕು ಉಪಾಧ್ಯಕ್ಷರಾದ ವಿಬಿ ನಾಗರಾಜ್, ಅಕ್ಕಿ ಜಿಲಾನ್, ನಗರ ಘಟಕ ಅಧ್ಯಕ್ಷ ಜಂಗ್ ನಾಗರಾಜ್,ಪದಾಧಿಕಾರಿಗಳಾದ ಡಿಸ್ ಪ್ರಸಾದ್, ಶ್ರೀನಿವಾಸ, ಹೂಗಾರ್ ಗಣೇಶ, ಪತ್ರಯ ಸ್ವಾಮಿ, ರಘುನಾಯಕ, ಕಟ್ಟೆ ವಿನಯ, ಎನ್. ರಾಮಚಂದ್ರ ವಿವಿಧ ಘಟಕಗಳ ಮುದ್ದಾಪುರ ಘಟಕದ ಎಲ್ಲಾ ಪದಾಧಿಕಾರಿಗಳು ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ನೂರಾರು ಸಂಖ್ಯೆಯ ಕನ್ನಡಾಭಿಮಾನಿಗಳು ಮತ್ತು ಕರವೇ ಕಾರ್ಯಕರ್ತರು ಹಾಜರಿದ್ದರು.

ಸಾಹಿತ್ಯ ಸಿಂಚನ

ರೆಕ್ಕೆ ಬಿಚ್ಚಿದ ಕನಸು

ಮನದಾಳದಲ್ಲಿ ಮೂಡಿದ ಕನಸು,
ಮೌನದೊಳಗೆ ಬೆಳೆದಿತು.
ಕತ್ತಲೆಯ ದಾರಿಯ ನಡುವೆಯೂ,
ಬೆಳಕಿನ ಹಾದಿ ಹುಡುಕಿತು.

ನಿನ್ನೆಗಿನ ನೋವು ಮರೆತು,
ಇಂದು ಹೊಸ ಹೆಜ್ಜೆ ಇಟ್ಟಿತು.
ಭರವಸೆಯ ಗಾಳಿಯ ಜೊತೆ,
ರೆಕ್ಕೆ ಬಿಚ್ಚಿ ಹಾರಿತು.

ಆಕಾಶದ ಅಂಚು ಮುಟ್ಟುವಂತೆ,
ಆಸೆಗಳು ರೆಕ್ಕೆ ಕಟ್ಟಿದವು.
ಸೋಲಿನ ನೆರಳು ಬಂದರೂ,
ಧೈರ್ಯದಿಂದ ಮುಂದೆ ಸಾಗಿದವು.

ಕನಸು ಕೇವಲ ಕನಸಾಗದೆ,
ಗುರಿಯ ರೂಪ ತಾಳಿತು.
ನಂಬಿಕೆಯ ಬಲದೊಂದಿಗೆ,
ಜೀವನಕ್ಕೆ ಅರ್ಥ ನೀಡಿತು.

ರೆಕ್ಕೆ ಬಿಚ್ಚಿದ ಆ ಕನಸು,
ನನ್ನೊಳಗೆ ಹೊಸ ಲೋಕ ಕಟ್ಟಿತು.
ಒಂದು ದಿನ ನನಸಾಗುವ ನಂಬಿಕೆಯಲ್ಲಿ,
ಪ್ರತಿದಿನವೂ ಮುಂದೆ ನಡೆಯಿತು.

ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಪ್ರಜಾಸೇವಾ ವಿಶೇಷ ಇ-ಖಾತಾ ವಿತರಣಾ ಆಂದೋಲನವನ್ನು ಉದ್ಘಾಟಿಸಿ ಆಂದೋಲನದಲ್ಲಿ 730 ಜನ ಅರ್ಜಿ ಸಲ್ಲಿಸಿದ್ದರು. ಅವರ ಪೈಕಿ 590 ಜನಕ್ಕೆ ಇ-ಖಾತೆ ನೀಡಲಾಗಿದೆ. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಯತೀಂದ್ರ

❏ ನೈಜ್ಯ ದೆಸೆ ನ್ಯೂಸ್

ತಾಂಡವಪುರ: ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಪ್ರಜಾಸೇವಾ ವಿಶೇಷ ಇ-ಖಾತಾ ವಿತರಣಾ ಆಂದೋಲನವನ್ನು ಉದ್ಘಾಟಿಸಿ ಆಂದೋಲನದಲ್ಲಿ 730 ಜನ ಅರ್ಜಿ ಸಲ್ಲಿಸಿದ್ದರು. ಅವರ ಪೈಕಿ 590 ಜನಕ್ಕೆ ಇ-ಖಾತೆ ನೀಡಲಾಗಿದೆ ಎಂದು. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾಕ್ಟರ್ ಎಸ್ ಯತೀಂದ್ರ ಸಿದ್ದರಾಮಯ್ಯ ರವರು ಹೇಳಿದರು



ಬಳಿಕ ಮಾತನಾಡಿದ ಸಚಿವರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸುಮಾರು 2 ಲಕ್ಷದ 10 ಸಾವಿರಕ್ಕೂ ಹೆಚ್ಚು ಆಸ್ತಿಗಳಿವೆ. ಈವರೆಗೆ 78,700ಕ್ಕೂ ಹೆಚ್ಚು ಆಸ್ತಿಗಳಿಗೆ ಇ-ಖಾತಾ ವಿತ-ರಿಸಲಾಗಿದೆ. ಉಳಿದಿರುವ ಎಲ್ಲಾ ಅರ್ಹ ಆಸ್ತಿಗಳಿಗೂ ಇ-ಖಾತಾ ವಿತರಿಸುವ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ಅಧಿಕಾರಿಗಳಿಗೆ ಸಚಿವರು ಖಡಕ್ ಸೂಚನೆ ನೀಡಿದರು ಪ್ರಜಾಸೇವಾ ವಿಶೇಷ ಇ-ಖಾತಾ ಆಂದೋಲನಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ದೊರೆತಿದೆ, ಯಾವುದೇ ಅರ್ಹ ಆಸ್ತಿ ಮಾಲೀಕರು ದಾಖಲೆಗಳ ಕೊರತೆಯಿಂದ ಇ-ಖಾತಾ ಸೌಲಭ್ಯದಿಂದ ವಂಚಿತರಾಗಬಾರದು ಎಂಬುದು ನಮ್ಮ ಉದ್ದೇಶವಾಗಿದೆ. ಎಂದು ಹೇಳಿದ ಸಚಿವರು ಅಕ್ಟೋಬರ್ 28ರ ಆಂದೋಲನದಲ್ಲಿ ಭಾಗವಹಿಸಲು ಸಾಧ್ಯವಾಗದ ನಾಗರಿಕರಿಗೆ, ಅಗತ್ಯ ದಾಖಲೆ ನೀಡಲು ಸಾಧ್ಯವಾಗದ ಆಸ್ತಿ ಮಾಲೀಕರಿಗೆ ಮತ್ತೊಂದು ಅವಕಾಶ ಕಲ್ಪಿಸಲು ನವೆಂಬರ್ 5, 6 ಮತ್ತು 7ರಂದು ವಿಶೇಷ ಇ-ಖಾತಾ ಆಂದೋಲನ ನಡೆಸಲಾಗುವುದು. ಎಂದು ಹೇಳಿದರು ಈ ಸಂದರ್ಭದಲ್ಲಿ ನರಸಿಂಹರಾಜ ಕ್ಷೇತ್ರದ ಶಾಸಕರಾದ ತನ್ವೀರ್ ಸೇಠ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ (KEA) ಅಧ್ಯಕ್ಷರಾದ ಆಯೂಬ್ ಖಾನ್, ಮೈಸೂರು ಮಹಾನಗರ ಪಾಲಿಕೆ (ಒಅಅ) ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಉಸ್ತುವಾರಿ ಸಮಿತಿಯ ಅಧ್ಯಕ್ಷೆ ಪುಷ್ಪವಲ್ಲಿ, ಮೈಸೂರು ಮಹಾನಗರ ಪಾಲಿಕೆಯ ಮಾಜಿ ಮೇಯರ್ ಆರೀಫ್ ಹುಸೇನ್, ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತರಾದ ನಿತೇಶ್ ಪಾಟೀಲ್, ಜಿಲ್ಲಾಧಿಕಾರಿಗಳಾದ ಜಿ. ಲಕ್ಷ್ಮೀಕಾಂತ ರೆಡ್ಡಿ,

ಮಾನಸಿಕ ರೋಗಿಗಳಿಗೆ ಸಮಾಧಾನ, ಸೂಕ್ತ ಸಮಾಲೋಚನೆ ನೀಡಿ ಚಿಕಿತ್ಸೆ ಕೊಡಿಸಿ – ಅರುಣ್ ಕುಮಾರ್ ಕುಲಕರ್ಣಿ

ಮಾನಸಿಕ ಕಾಯಿಲೆಗಳಿಗೆ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಉಚಿತ ಚಿಕಿತ್ಸೆ ಲಭ್ಯ

❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾನಸಿಕ ಆರೋಗ್ಯ ವಿಭಾಗ ರಾಯಚೂರು, ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾ ಹಾಗೂ ಸರ್ಕಾರಿ ಶಿಕ್ಷಕರ ತರಬೇತಿ ಕೇಂದ್ರ ಸಿಂಧನೂರು ಇವರುಗಳ ಸಂಯುಕ್ತ ಆಶ್ರಯದಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.



ಕಾರ್ಯಕ್ರಮದಲ್ಲಿ ಮಾತನಾಡಿದ ಮನಶಾಸ್ತ್ರಜ್ಞರಾದ ಅರುಣ್ ಕುಮಾರ್ ಕುಲಕರ್ಣಿ ಅವರು, "ಆರೋಗ್ಯವೇ ಭಾಗ್ಯ. ಪ್ರತಿಯೊಬ್ಬರೂ ಆರೋಗ್ಯವಾಗಿರಬೇಕು ಎಂದು ಬಯಸುತ್ತೇವೆ. ಆರೋಗ್ಯವೆಂದರೆ ಕೇವಲ ಕಾಯಿಲೆ ಇಲ್ಲದಿರುವುದಲ್ಲ. ದೈಹಿಕ, ಮಾನಸಿಕ ಹಾಗೂ ಸಾಮಾಜಿಕವಾಗಿ ಸಂಪೂರ್ಣ ಕ್ಷೇಮವಾಗಿರುವುದೇ ನಿಜವಾದ ಆರೋಗ್ಯವಾಗಿದೆ. ಇಂದಿನ ದಿನಗಳಲ್ಲಿ ಅನೇಕ ಜನರು ವಿವಿಧ ರೀತಿಯ ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಇಂತಹವರನ್ನು ಮಾನಸಿಕ ಸಮಸ್ಯೆಗಳಿಂದ ಹೊರತರಲು ಸೂಕ್ತ ಆಪ್ತಸಮಾಲೋಚನೆ, ಕುಟುಂಬದವರ ಪ್ರೀತಿ, ಸಹಕಾರ ಹಾಗೂ ಅಗತ್ಯ ವೈದ್ಯಕೀಯ ಚಿಕಿತ್ಸೆ ಬಹಳ ಮುಖ್ಯವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಮಾನಸಿಕ ಕಾಯಿಲೆಗಳ ಕು-ರಿತು ಹಲವಾರು ಮೂಢನಂಬಿಕೆಗಳು ಮತ್ತು ತಪ್ಪು ಕಲ್ಪನೆಗಳು ಇಂದಿಗೂ ಇವೆ. ಅವುಗಳನ್ನು ಹೋಗಲಾಡಿಸಿ ಜನರಲ್ಲಿ ವೈಜ್ಞಾನಿಕ ಅರಿವು ಮೂಡಿಸುವುದು ಅಗತ್ಯವಾಗಿದೆ" ಎಂದರು.

ನಂತರ ಮಾತನಾಡಿದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಅವರು, "ಮಾನಸಿಕ ಕಾಯಿಲೆಗಳಿಗೆ ಇಂದು ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಉಚಿತ ಚಿಕಿತ್ಸೆ ಲಭ್ಯವಿದೆ. ಮನೋಚೈತನ್ಯ ಕಾರ್ಯಕ್ರಮದ ಮೂಲಕ ಮಾನಸಿಕ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವವರಿಗೆ ಉಚಿತ ಆಪ್ತಸಮಾಲೋಚನೆ ಹಾಗೂ ಚಿಕಿತ್ಸಾ ಸೌಲಭ್ಯ ಒದಗಿಸಲಾಗುತ್ತಿದೆ.

ಆದ್ದರಿಂದ ಮಾನಸಿಕ ಸಮಸ್ಯೆಗಳ ಲಕ್ಷಣಗಳು ಕಂಡುಬಂದ ತಕ್ಷಣವೇ ಅವರನ್ನು ಗುರುತಿಸಿ, ಸೂಕ್ತ ವೈದ್ಯಕೀಯ ಚಿಕಿತ್ಸೆ ಕೊಡಿಸಬೇಕು. ಮಾನಸಿಕ ಕಾಯಿಲೆಗಳನ್ನು ಮುಚ್ಚಿಡದೆ, ರೋಗಿಗಳಿಗೆ ಧೈರ್ಯ ತುಂಬಿ, ಕುಟುಂಬದವರು ಮತ್ತು ಸಮಾಜದವರು ಪ್ರೀತಿ ಹಾಗೂ ಸಹಾನುಭೂತಿಯಿಂದ ವರ್ತಿಸಬೇಕು" ಎಂದು ತಿಳಿಸಿದರು. ನಂತರ ಮಾತನಾಡಿದ ಸರ್ಕಾರಿ ಶಿಕ್ಷಕರ ತರಬೇತಿ ಕೇಂದ್ರದ ಪ್ರಾಂಶುಪಾಲರಾದ ಹುಂಬ್ಬಣ್ಣ .ಎಲ್ . ವಿದ್ಯಾರ್ಥಿಗಳು ಹಾಗೂ ಯುವಜನರಲ್ಲಿ ಖಿನ್ನತೆ, ಚಿತ್ತಚಂಚಲತೆ, ಅಪಸ್ಮಾರ, ಬುದ್ಧಿಮಾಂದ್ಯತೆ ಸೇರಿದಂತೆ ವಿವಿಧ ಮಾನಸಿಕ ಆರೋಗ್ಯ ಸಮಸ್ಯೆಗಳ ಕು-ರಿತು ಅರಿವು ಮೂಡಿಸಬೇಕು. ಮದ್ಯಪಾನ, ಧೂಮಪಾನ ಹಾಗೂ ಇತರ ದುಶ್ಚಟಗಳಿಂದ ದೂರವಿರಲು ಜಾಗೃತಿ ಮೂಡಿಸಬೇಕು.

ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿರುವವರನ್ನು ನಿರ್ಲಕ್ಷಿಸದೆ ಅವರಿಗೆ ಸೂಕ್ತ ಸಮಾಲೋಚನೆ ಮತ್ತು ವೈದ್ಯಕೀಯ ಚಿಕಿತ್ಸೆ ಕೊಡಿಸುವ ಮೂಲಕ ಮಾನಸಿಕವಾಗಿ ಆರೋಗ್ಯವಂತ ಸಮಾಜ ನಿರ್ಮಾಣ-ಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದರು. ಈ ಸಂದರ್ಭದಲ್ಲಿ ಸರ್ಕಾರಿ ಶಿಕ್ಷಕರ ತರಬೇತಿ ಕೇಂದ್ರದ ಉಪನ್ಯಾಸಕರಾದ ಮುನಿಷ ಕಿರ್ಲೋಸ್ಕರ್ ಕೆ ಸಿ ಹವಾಲದ್ದಾರ್ .ರಾಮೇಶ್ವರ ದಿನ್ನಿ. ಕೃಷ್ಣ , ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಹತ್ತೂರ ಅರಸನಾದರು ಹೆತ್ತವರ ಸೇವೆ ಮಾಡುವದು ಶ್ರೇಷ್ಠ: ಡಾ. ಕೈಲಾಸನಾಥ ಶ್ರೀಗಳ ಆಶೀರ್ವಚನ



❏ ನೈಜ್ಯ ದೆಸೆ ನ್ಯೂಸ್

ಕೊಲ್ಹಾರ: ಶ್ರೀ ಪಿತಾಶ್ರೀ ಮುರುಗಯ್ಯ ಅಜ್ಜನವರ 21ನೇ ಪುಣ್ಯಾರಾಧನೆ ಹಾಗೂ ಮಾತೋಶ್ರೀ ಪಾರ್ವತಮ್ಮನವರ 5ನೇ ವರ್ಷದ ಪುಣ್ಯಾರಾಧನೆ ಪೂಜಾ ಕಾರ್ಯಕ್ರಮವು ಶ್ರದ್ಧಾ-ಭಕ್ತಿಯಿಂದ ಜರುಗಿತು. ಈ ಸಂದರ್ಭದಲ್ಲಿ ಧರ್ಮರತ್ನ ಶಿವಾಚಾರ್ಯ ಭೂಷಣ ಡಾ. ಕೈಲಾಸನಾಥ ಮಹಾಸ್ವಾಮಿಗಳು ಅಮೃತ ನುಡಿಗಳನ್ನಾಡಿದರು. "ಹತ್ತೂರಿಗೆ ಅರಸನಾದರೂ ಹೆತ್ತವರ ಸೇವೆ ಮಾಡುವುದು? ಜೀವನದ ಅತ್ಯಂತ ಶ್ರೇಷ್ಠ ಕಾರ್ಯ" ಎಂದು ಶ್ರೀಗಳು ತಿಳಿಸಿದರು.

ಗೃಹಸ್ಥ, ಸನ್ಯಾಸ, ವಾನಪ್ರಸ್ಥ ಎಂಬ ಮೂರು ಆಶ್ರಮಗಳಲ್ಲಿ "ಧನ್ಯೋ ಗೃಹಸ್ಥ ಆಶ್ರಮಿ" ಎಂದು ಗೃಹಸ್ಥ ಆಶ್ರಮದ ಮಹತ್ವವನ್ನು ಸ್ಮರಿಸಿದರು. ಕಡುಬಡತನದಲ್ಲೂ ಆಧ್ಯಾತ್ಮಿಕ ಸಾಧನೆಗೈದು, ಹತ್ತು ಮಕ್ಕಳನ್ನು ಉತ್ತಮ ಸಂಸ್ಕಾರವಂತರನ್ನಾಗಿ ಮಾಡಿ, ಸರ್ವಧರ್ಮದ ಜನರಿಗೆ ದಾರಿದೀಪವಾಗಿರುವ ಇವರ ಜೀವನ ಎಲ್ಲರಿಗೂ ಮಾದರಿ ಎಂದರು. ತಂದೆ ತಾಯಿಯವರ ಪುಣ್ಯಸ್ಮರಣೆ ಮಾಡುವದು, ಅವರು ತೋರಿದ ದಾರಿಯಲ್ಲಿ ಸಾಗಿ ಸಮಾಜದಲ್ಲಿ ಉತ್ತಮ ಸಂಸ್ಕಾರವಂತರಾಗಿ ಬಾಳಿದರೆ ಸ್ವರ್ಗದಲ್ಲಿರುವ ತಂದೆ ತಾಯಿಯವರ ಆತ್ಮಕ್ಕೆ ಶಾಂತಿ ಸಿಗುತ್ತದೆ ಎಂದು ಶ್ರೀ ಫಣಮಹಿಮ ಪೂರ್ಣಜ್ಞ ಧರ್ಮರತ್ನ ಶಿವಾಚಾರ್ಯ ಭೂಷಣ ಡಾ. ಕೈಲಾಸನಾಥ ಮಹಾಸ್ವಾಮಿಗಳವರು ಅಭಿಪ್ರಾಯಪಟ್ಟರು. ಜೀವನದಲ್ಲಿ ಎಂತಹ ಕಷ್ಟ ಬಂದರೂ ಹತ್ತು ಜನ ಮಕ್ಕಳಿಗೆ ಆಧ್ಯಾತ್ಮಿಕ ಜ್ಞಾನ ನೀಡುವ ಮೂಲಕ ಕೀರ್ತಿ ತರುವಂತೆ ಮಾಡಿದ ಅಜ್ಜ-ಅಮ್ಮನವರ ಮಕ್ಕಳಾದ ನಾವು ನಿಜಕ್ಕೂ ಪುಣ್ಯವಂತರು.

"ಹತ್ತೂರಿಗೆ ಅರಸನಾದರೂ ಹೆತ್ತವರ ಸೇವೆ ಮಾಡುವದು ಶ್ರೇಷ್ಠ" ಎಂದು ಶ್ರೀಗಳು ನುಡಿದರು. ಗೃಹಸ್ಥ, ಸನ್ಯಾಸ, ವಾನಪ್ರಸ್ಥ ಎಂಬ ಮೂರು ಆಶ್ರಮಗಳಲ್ಲಿ ಗೃಹಸ್ಥ ಆಶ್ರಮದ ಮಹತ್ವವನ್ನು ಅನೇಕ ಮಹಾತ್ಮರು ಸಾರುತ್ತ "ಧನ್ಯೋ ಗೃಹಸ್ಥ ಆಶ್ರಮಿ" ಎಂದಿದ್ದಾರೆ. ಎಲ್ಲೋ ಜನಿಸಿದ ಒಬ್ಬ ಹೆಣ್ಣುಮಗಳು ಗುರುತು-ಪ-ರಿಚಯವಿಲ್ಲದ ಮನೆಗೆ ಸೊಸೆಯಾಗಿ ಬಂದು, ಅತ್ತೆ-ಮಾವ, ಭಾವ-ಮೈದುನ, ನಾದಿನಿಯರ ಜೊತೆ ಹೊಂದಿಕೊಂಡು, ಗಂಡನಿಗೆ ಸಾಧ್ವಿಸಿರೋಮಣಿ ಸತಿಯಾಗಿ, ತಂದೆ-ತಾಯಿ, ಅಣ್ಣ-ತಮ್ಮ, ಅಕ್ಕ-ತಂಗಿ, ಒರಿಗೆಯ ಗೆಳತಿಯರು ಎಲ್ಲರನ್ನು ತೊರೆದು ತವರುಮನೆಯ ಕೀರ್ತಿ ತರಲು ಗಟ್ಟಿಯಾದ ಮನಸ್ಸಿನಿಂದ ಪತಿಯೇ ಪರಮಾತ್ಮ ಎಂದು ನಂಬಿ ಅನೇಕ ಮಕ್ಕಳನ್ನು ಪಡೆದು ಸಾರ್ಥಕ ಜೀವನ ನಡೆಸುವುದೇ ನಿಜಕ್ಕೂ ಒಂದು ದೊಡ್ಡ ತಪಸ್ಸು ಎಂದು ತಾಯಿಯವರ ತ್ಯಾಗವನ್ನು ಸ್ಮರಿಸಿದರು.

ಕೊಲ್ಹಾರ ಪಟ್ಟಣದ ಶ್ರೀ ಹಿರೇಪಟ್ಟದೇವರ ಶೀಲವಂತ ಹಿರೇಮಠದ ಪೂಜ್ಯರಾದ ಶ್ರೀ ಪಿತಾಶ್ರೀ ಮುರುಗಯ್ಯ ಅಜ್ಜನವರು ಹಾಗೂ ಮಾತೋಶ್ರೀ ಪಾರ್ವತಮ್ಮನವರು ಪ್ರಾಪಂಚಿಕ ಜೀವನ ನಡೆಸಿ, ಹತ್ತು ಮಕ್ಕಳನ್ನು ಪಡೆದು, ಕಡುಬಡತನವಿದ್ದರೂ ಹೆದರದೆ ಆಧ್ಯಾತ್ಮದ ಸಾಧನೆ ಮಾಡುತ್ತಾ "ನಂಬಿದವರಿಗೆ ದೇವರಿದ್ದಾನೆ" ಎಂಬಂತೆ ಸತ್ಯದ ಪಥವನ್ನು ಬಿಡದೆ ಮಕ್ಕಳಿಗೆ ಉತ್ತಮ ಸಂಸ್ಕಾರ-ಶಿಕ್ಷಣ ನೀಡಿ ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿ ಸರ್ವಧರ್ಮದ ಜನಾಂಗಕ್ಕೆ ದಾರಿದೀಪವಾಗಿದ್ದಾರೆ. ತುಂಬಾ ಬಡತನವಿದ್ದಾಗ ಸಂಸಾರ ಸಾಗಿಸಲು ಕೊಲ್ಹಾರ ಪಟ್ಟಣದ ಶಿರಾಣಿಯವರ ಹೊಲವನ್ನು ನಾಲ್ಕು ಚೀಲ ಜೋಳದ ಲಾವಣಿ ಕೊಡುವ ಕರಾ-ರಿನಂತೆ ಬೇಸಾಯ ಮಾಡಲಾಗುತ್ತಿತ್ತು. ಉತ್ತಮ ಮಳೆಯಾಗಿ ಭೂಮಿ ಹದವಾದಾಗ, ಅಜ್ಜ-ಅಮ್ಮನವರು ಬಿಳಿ ಜೋಳ ಬಿತ್ತಲು ಮಾತುಕತೆ ನಡೆಸಿ ಬೀಜ ತರಲು ಹಣವಿಲ್ಲದೆ ಚಿಂತಿಸಿದರು.

ಆಗ ಅಮ್ಮನವರು ತಮ್ಮ ತವರುಮನೆ ಊರು ಕುಂದರಗಿ ಜಡೆಮಠಕ್ಕೆ ತೆರಳಿದರು. ಅಣ್ಣ ಶಿವಮೂರ್ತಯ್ಯನವರಲ್ಲಿ "ಬಿತ್ತುವ ಐದು ಸೇರು ಜೋಳದ ಬೀಜ ಕೊಡು ಅಣ್ಣಾ" ಎಂದು ಕೇಳಿದಾಗ, "ನಮಗೆ ಬಿತ್ತಲು ಬೀಜವಿಲ್ಲ, ಅಲ್ಲೇ ನಿಮ್ಮೂರಿನ ಸಂತೆಯಲ್ಲಿ ತಗೊಂಡು ಬಿತ್ತಿರಿ" ಎಂದು ಹೇಳಿ ಅಣ್ಣ ಹೊಲಕ್ಕೆ ಹೋದರು. ಸಣ್ಣ ತಮ್ಮ ಶಿವಲಿಂಗಯ್ಯ "ಅಕ್ಕ ಕೂಡಿದ್ದ ಮನೆ ನಮ್ಮದು, ಒಂದು ಚೀಲ ಬಿತ್ತುವ ಜೋಳ ಇದೆ, ಅಣ್ಣ ಕೊಡಲಿಲ್ಲ, ನಾನು ಏನು ಮಾಡಲಿ, ಅಕ್ಕಡಿ ಕಾಳನ್ನು ಕೊಡುತ್ತೇನೆ ಒಯ್ಯಿ" ಎಂದು ಕಡ್ಲಿ, ಅಗಸಿ, ಕುಸುಬಿ ಗಂಟು ಕಟ್ಟಿ ಕೊಟ್ಟರು. ಚೀಲ ಜೋಳವಿದ್ದರೂ ಅಣ್ಣ ಐದು ಸೇರು ಜೋಳ ಕೊಡಲಿಲ್ಲ ಎಂದು ಸುಮ್ಮನೆ ಅಮ್ಮನವರು ಕೊಲ್ಹಾರಕ್ಕೆ ಬಂದರು. ಮರುದಿನ ಶಿವಮೂರ್ತಯ್ಯ ಬಿತ್ತುವ ಬೀಜದ ಚೀಲ ಬಿಚ್ಚಿ ನೋಡಿದಾಗ ಚೀಲ ತುಂಬ ನುಸಿಯಾಗಿ ಜೋಳೆಲ್ಲ ದೂಷಳಾಗಿದ್ದು ಕಂಡು, "ನಾನು ತಪ್ಪು ಮಾಡಿದೆ" ಎಂದು ಎತ್ತಿನ ಬಂಡಿ ಹೂಡಿಕೊಂಡು ಕೊಲ್ಹಾರ ಮಠಕ್ಕೆ ಬಂದು ತಂಗಿ ಪಾರ್ವತಮ್ಮನವರನ್ನು ಕುಂದರಗಿಗೆ ಕರೆದುಕೊಂಡು ಹೋಗಿ, "ತಂಗಿ ನನಗೆ ಕ್ಷಮಿಸು, ತುಂಬಿದ ಚೀಲ ನೀನೇ ಬಿಚ್ಚು" ಎಂದರು. ಆಗ ಅಮ್ಮನವರು "ಏನಪ್ಪಾ ಅಣ್ಣಾ ಬರೀ ನುಶಿ ತುಂಬಿದ್ದೀಯಾ?" ಎಂದು ಹೇಳಿ ತಮ್ಮ ಸೀರೆ ಸೆರಗಿನಿಂದ ಚೀಲದ ಮೇಲೆ ಕೈಯಾಡಿಸಿ ಬಿಚ್ಚಿದಾಗ, ನುಶಿಯೆಲ್ಲಾ ಹೋಗಿ ಬೆಂಡೆ ಬೀಜದಂತೆ ಜೋಳ ಸೊಚ್ಚಗಾಗಿ ಕಾಣಿಸಿತು. ಆಗ ಅಣ್ಣ ಶಿವಮೂರ್ತಯ್ಯ ಅಮ್ಮನವರಿಗೆ ಸೀರೆ ಉಡಿಸಿ, "ತಂಗಿ ನುಶಿ ಹತ್ತಿದ ಜೋಳ ನಿನ್ನ ಹಸ್ತದಿಂದ ಮುತ್ತಾಗಿವೆ, ಇದು ಮಹಾನ್ ಪವಾಡ" ಎಂದು ನಮಸ್ಕರಿಸಿ ಉಡಿ ತುಂಬಿ ಕಳಿಸಿದರು. ಅಂದಿನಿಂದ ಇಂದಿನವರೆಗೂ ತಮ್ಮನಾದ ಶಿವಲಿಂಗಯ್ಯನವರು ಬಿತ್ತುವ ಬೀಜ ಕೊಡುವ ಸಂಪ್ರದಾಯವನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಹೀಗೆ ತವರಿನಲ್ಲಿ ಲೀಲೆ ತೋರಿದ ಅಮ್ಮನವರು, ಈಗಲೂ ಅಜ್ಜ-ಅಮ್ಮನವರ ದರ್ಶನ ಪಡೆದ ಸದ್ಭಕ್ತರಿಗೆ ಕರ್ತೃಗದ್ದುಗೆಯಿಂದ ಆಶೀರ್ವಾದ ದಯಪಾಲಿಸುವ ಕಾಮಧೇನುವಾಗಿದ್ದಾರೆ.

ಶ್ರೀ ಅಂಬಾಮಠದ ದೇವಸ್ಥಾನ ಉದ್ಘಾಟನಾ ಸಮಾರಂಭದಲ್ಲಿ ಆರೋಗ್ಯ ಇಲಾಖೆಯಿಂದ ಹಾಗೂ ಸನ್ ರೈಸ್ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳಿಂದ ಜೀವ ರಕ್ಷಕ ಆರೋಗ್ಯ ಜಾಗೃತಿ ಕಾರ್ಯಕ್ರಮ ಯಶಸ್ವಿ

❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಶ್ರೀ ಅಂಬಾಮಠದ ನೂತನ, ಶೀಲಾ ಮಂಟಪದ ಲೋಕಾರ್ಪಣೆ ಮತ್ತು ಶ್ರೀ ಅಂಬಾದೇವಿಯ ಮೂರ್ತಿ ಪ್ರತಿಷ್ಠಾಪನೆಯ ವಿಶೇಷ ಕಾರ್ಯಕ್ರಮದ ಅಂಗವಾಗಿ ದೇವಸ್ಥಾನದ ಉದ್ಘಾಟನಾ ಸಮಾರಂಭದಲ್ಲಿ ಆರೋಗ್ಯ ಇಲಾಖೆಯಿಂದ ಸಾರ್ವಜನಿಕರಲ್ಲಿ ಆರೋಗ್ಯ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಅಂಬಾಮಠದ ದೇವಸ್ಥಾನದ ಎದುರುಗಡೆ ಹಾಗೂ ಪ್ರಸಾದದ ಮಳಿಗೆ ವಿವಿಧ ಬಿದಿಗಳಲ್ಲಿ ಜಾಗೃತಿ ಕಾರ್ಯಕ್ರಮದಲ್ಲಿ ಹಾವು ಕಡಿತ, ನಾಯಿ ಕಡಿತ ಹಾಗೂ ತುರ್ತು ಸಂದರ್ಭದಲ್ಲಿ ಸಿಪಿಆರ್ (ಅಕಖ) ಜೀವ ರಕ್ಷಕ ಪ್ರಾತ್ಯಕ್ಷಿಕೆ ಮೂಲಕ ಭಕ್ತರಲ್ಲಿ ಆರೋಗ್ಯ ಜಾಗೃತಿ ಮೂಡಿಸಲಾಯಿತು. ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಸಿಂಧನೂರು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ ಸಾಲಗುಂದ ಹಾಗೂ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಸಿಂಧನೂರು ಇವರ ಸಂಯುಕ್ತಾಶ್ರಯದಲ್ಲಿ

ಸಿಂಧನೂರು: ಅಂಬಾಮಠದಲ್ಲಿ ನಿನ್ನೆ ನಡೆದ ನೂತನ ಅಂಬಾದೇವಿ ದೇವಸ್ಥಾನದ ಉದ್ಘಾಟನಾ ಸಮಾರಂಭದ ಪ್ರಯುಕ್ತ ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ, ಸಿಂಧನೂರು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ ಸಾಲಗುಂದ ಹಾಗೂ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್, ಸಿಂಧನೂರು ಇವರ ನೇತೃತ್ವದಲ್ಲಿ ಆರೋಗ್ಯ ಇಲಾಖೆಯ ವತಿಯಿಂದ ವಿಶೇಷ ಸಾರ್ವಜನಿಕ ಆರೋಗ್ಯ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ದೇವಸ್ಥಾನದ ಉದ್ಘಾಟನಾ ಸಮಾರಂಭಕ್ಕೆ ಆಗಮಿಸಿದ್ದ ಅಪಾರ ಸಂಖ್ಯೆಯ ಭಕ್ತಾದಿಗಳು, ಸಾರ್ವಜನಿಕರು ಹಾಗೂ ಗ್ರಾಮಸ್ಥರ ನಡುವೆ ಆರೋಗ್ಯದ ಕು-



ರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಹಾವು ಕಡಿತ, ನಾಯಿ ಕಡಿತ ಮತ್ತು ಹಠಾತ್ ಹೃದಯ ಸ್ತಂಭನದಂತಹ ತುರ್ತು ಸಂದರ್ಭಗಳಲ್ಲಿ ಅನುಸರಿಸಬೇಕಾದ ಜೀವ ರಕ್ಷಕ ಪ್ರಥಮ ಚಿಕಿತ್ಸಾ ಕ್ರಮಗಳ ಕುರಿತು ಮಾಹಿತಿ ನೀಡಲಾಯಿತು.

ಕಾರ್ಯಕ್ರಮದಲ್ಲಿ ಡಾ. ಮಣಿಶಂಕರ ವೈದ್ಯಾಧಿಕಾರಿಗಳು ಸಿಂಧನೂರು ಅವರು ಸಾರ್ವಜನಿಕರಿಗೆ ಆರೋಗ್ಯ ಶಿಕ್ಷಣದ ಮಹತ್ವವನ್ನು ವಿವರಿಸಿ, ಹಾವು ಕಡಿತ ಸಂಭವಿಸಿದ ಸಂದರ್ಭದಲ್ಲಿ ಭಯಭೀತರಾಗದೆ ತಕ್ಷಣವೇ ಸಮೀಪದ ಆಸ್ಪತ್ರೆಗೆ ಕರೆದೊಯ್ಯಬೇಕು. ಕಚ್ಚಿದ ಜಾಗದಲ್ಲಿ ಗಾಯವನ್ನು ಕತ್ತರಿಸುವುದು, ವಿಷ ಹೀರಲು ಪ್ರಯತ್ನಿಸುವುದು, ಬಿಗಿಯಾಗಿ ಹಗ್ಗ ಕಟ್ಟುವುದು ಅಥವಾ ಮಂತ್ರ-ತಂತ್ರಗಳ ಮೊರೆ ಹೋಗುವುದು ಅಪಾಯಕಾರಿ ಎಂಬುದನ್ನು ತಿಳಿಸಿದರು. ಹಾವು ಕಡಿತಕ್ಕೆ ಒಳಗಾದ ವ್ಯಕ್ತಿಗೆ ಸಮಯಕ್ಕೆ ಸರಿಯಾಗಿ ಆಸ್ಪತ್ರೆಯಲ್ಲಿ ಸೂಕ್ತ ಚಿಕಿತ್ಸೆ ದೊರೆಯುವುದು ಅತ್ಯಂತ ಅಗತ್ಯವೆಂದು ಮನವರಿಕೆ ಮಾಡಿಕೊಟ್ಟರು. ಅದೇ ರೀತಿ ನಾಯಿ ಕಡಿತದ ಕುರಿತು ಮಾಹಿತಿ ನೀಡುತ್ತಾ, ನಾಯಿ ಅಥವಾ ಇತರ ಪ್ರಾಣಿಗಳು ಕಚ್ಚಿದ ತಕ್ಷಣ ಗಾಯವನ್ನು ಸೋಪು ಮತ್ತು ಹರಿಯುವ ನೀರಿನಿಂದ ಕನಿಷ್ಠ 15 ನಿಮಿಷಗಳ ಕಾಲ ಚೆನ್ನಾಗಿ ತೊಳೆಯಬೇಕು.

ತಡಮಾಡದೆ ಸಮೀಪದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ವೈದ್ಯರ ಸಲಹೆಯಂತೆ ರೇಬಿಸ್ ನಿರೋಧಕ ಲಸಿಕೆ ಹಾಗೂ ಅಗತ್ಯವಿದ್ದಲ್ಲಿ ಇಮ್ಯುನೊಗ್ಲೋಬ್ಯುಲಿನ್ ಚಿಕಿತ್ಸೆ ಪಡೆಯಬೇಕು. ನಾಯಿ ಕಡಿತವನ್ನು ನಿರ್ಲಕ್ಷಿಸುವುದರಿಂದ ರೇಬಿಸ್ ಎಂಬ ಮಾರಣಾಂತಿಕ ಕಾಯಿಲೆ ಉಂಟಾಗುವ ಸಾಧ್ಯತೆ ಇರುವುದರಿಂದ ಸಾರ್ವಜನಿಕರು ಎಚ್ಚರಿಕೆ ವಹಿಸಬೇಕೆಂದು ತಿಳಿಸಿದರು. ಕಾರ್ಯಕ್ರಮದ ಮತ್ತೊಂದು ಪ್ರಮುಖ ಆಕರ್ಷಣೆಯಾಗಿದ್ದ ಸಿಪಿಆರ್ (ಅಚಿಡಿಜುಂ-ರಿಣಾಟಟಂಟಿಚಿಡಿಥಿ ಖಜಣಾಭಿಣಚಿಣುಂಟಿ) ಪ್ರಾತ್ಯಕ್ಷಿಕೆಯಲ್ಲಿ ಹಠಾತ್ ಹೃದಯ ಸ್ತಂಭನ ಸಂಭವಿಸಿದ ಸಂದರ್ಭದಲ್ಲಿ ವ್ಯಕ್ತಿಯ ಜೀವ ಉಳಿಸಲು ತಕ್ಷಣ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ವಿವರಿಸಲಾಯಿತು. ವ್ಯಕ್ತಿ ಪ್ರಜ್ಞೆ ಕಳೆದುಕೊಂಡು ಸಾಮಾನ್ಯವಾಗಿ ಉಸಿರಾಡದಿದ್ದರೆ ತಕ್ಷಣ ತುರ್ತು ವೈದ್ಯಕೀಯ ನೆರವು ಪಡೆಯುವುದು, ಎದೆ ಒತ್ತುವಿಕೆ (ಱಜಣ ಅಂಟಿಠಿಡಿಜುಂಟಿ) ನೀಡುವುದು ಹಾಗೂ ಲಭ್ಯವಿದ್ದಲ್ಲಿ ಎಇಡಿ (೦ಇಅ) ಬಳಸುವ ಕು-ರಿತು ಪ್ರಾತ್ಯಕ್ಷಿಕೆಯ ಮೂಲಕ ತಿಳಿಸಲಾಯಿತು.

ಸಿಪಿಆರ್ ಎಂಬುದು ವೈದ್ಯಕೀಯ ಸಿಬ್ಬಂದಿಗೆ ಮಾತ್ರ ಸೀಮಿತವಾದ ಕೌಶಲವಲ್ಲ; ಸಾರ್ವಜನಿಕರೂ ಮೂಲಭೂತ ತರಬೇತಿ ಪಡೆದು ತುರ್ತು ಸಂದರ್ಭದಲ್ಲಿ ಜೀವ ರಕ್ಷಕರಾಗಬಹುದು ಎಂಬ ಸಂದೇಶವನ್ನು ಸಾರಲಾಯಿತು.



ಈ ಕಾರ್ಯಕ್ರಮದಲ್ಲಿ ಡಾ. ಲಕ್ಷ್ಮೀ ಕನಕಿ ಆಯುಷ್ ವೈದ್ಯಾಧಿಕಾರಿಗಳು ಸಾಲಗುಂದ ಅವರು ಭಾಗವಹಿಸಿ ಆರೋಗ್ಯ ಇಲಾಖೆಯ ವಿವಿಧ ಸಾರ್ವಜನಿಕ ಆರೋಗ್ಯ ಕಾರ್ಯಕ್ರಮಗಳು, ಸಾಂಕ್ರಾಮಿಕ ರೋಗಗಳ ತಡೆಗಟ್ಟುವಿಕೆ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಜಾಗೃತಿಯ ಅಗತ್ಯತೆಯ ಕುರಿತು ಮಾರ್ಗದರ್ಶನ ನೀಡಿದರು. ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್, ಸಿಂಧನೂ-ರಿನ ಪ್ರಾಚಾರ್ಯರಾದ ಶ್ರೀ ಲಾಜರ್ ಸಿರಿಲ್ ಜಿ ಅವರ ಮಾರ್ಗದರ್ಶನದಲ್ಲಿ ಸಮುದಾಯ ಆಧ-ಾರಿತ ಕಲಿಕಾ ಕಾರ್ಯಕ್ರಮದ ಅಂಗವಾಗಿ ಕ್ಷೇತ್ರ ಕಾರ್ಯನಿರ್ವಹಣೆಯಲ್ಲಿ ತೊಡಗಿಸಿಕೊಂಡಿರುವ ನರ್ಸಿಂಗ್ ವಿದ್ಯಾರ್ಥಿಗಳು ಈ ಆರೋಗ್ಯ ಜಾಗೃತಿ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.

ಹಾವು ಕಡಿತ, ನಾಯಿ ಕಡಿತ ಹಾಗೂ ಸಿಪಿಆರ್ ಕುರಿತು ಪ್ರಾತ್ಯಕ್ಷಿಕೆಗಳನ್ನು ಪ್ರದರ್ಶಿಸುವುದರ ಜೊತೆಗೆ ಸಾರ್ವಜನಿಕರ ಪ್ರಶ್ನೆಗಳಿಗೆ ಉತ್ತರಿಸಿ, ಆರೋಗ್ಯ ಸಂಬಂಧಿತ ತಪ್ಪು ನಂಬಿಕೆಗಳನ್ನು ಹೋಗಲಾಡಿಸುವ ಪ್ರಯತ್ನ ಮಾಡಿದರು. ವಿಶೇಷವಾಗಿ ಗ್ರಾಮೀಣ ಭಾಗದ ಜನಸಾಮಾನ್ಯರಿಗೆ ತುರ್ತು ಆರೋಗ್ಯ ಪರಿಸ್ಥಿತಿಯಲ್ಲಿ ಸಮಯೋಚಿತ ಪ್ರಥಮ ಚಿಕಿತ್ಸೆ ಮತ್ತು ಆಸ್ಪತ್ರೆಗೆ ತಲುಪಿಸುವ ಮಹತ್ವವನ್ನು ಮನವರಿಕೆ ಮಾಡಿಕೊಟ್ಟರು. ದೇವಸ್ಥಾನದಂತಹ ಧಾರ್ಮಿಕ ಹಾಗೂ ಸಾರ್ವಜನಿಕ ಸಮಾರಂಭಗಳಲ್ಲಿ ಸಾವಿರಾರು ಜನರು ಒಂದೆಡೆ ಸೇರುವ ಸಂದರ್ಭವನ್ನು ಆರೋಗ್ಯ ಶಿಕ್ಷಣಕ್ಕೆ ಸದುಪಯೋಗಪಡಿಸಿಕೊಂಡು, ಜನಸಾಮಾನ್ಯರಿಗೆ ಅಗತ್ಯವಾದ ಜೀವ ರಕ್ಷಕ ಆರೋಗ್ಯ ಮಾಹಿತಿಯನ್ನು ತಲುಪಿಸುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿತ್ತು. ಆರೋಗ್ಯ ಸೇವೆ ಎಂಬುದು ಕೇವಲ ಆಸ್ಪತ್ರೆಯ ನಾಲ್ಕು ಗೋಡೆಗಳಿಗೆ ಸೀಮಿತವಾಗಿರದೆ,

ಜನರು ಇರುವ ಸ್ಥಳಗಳಿಗೆ ತೆರಳಿ ಆರೋಗ್ಯ ಜಾಗೃತಿ ಮೂಡಿಸುವುದೂ ಆರೋಗ್ಯ ಇಲಾಖೆಯ ಪ್ರಮುಖ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ, ಸಿಂಧನೂರು ಹಾಗೂ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್, ಸಿಂಧನೂರು ಇವರ ಸಹಯೋಗದಲ್ಲಿ ನಡೆದ ಈ ಕಾರ್ಯಕ್ರಮವು ಸಾರ್ವಜನಿಕ ಆರೋಗ್ಯ ಶಿಕ್ಷಣ ಮತ್ತು ಸಮುದಾಯ ಸೇವೆಯ ದೃಷ್ಟಿಯಿಂದ ಅರ್ಥಪೂರ್ಣ ಕಾರ್ಯಕ್ರಮವಾಗಿ ಮೂಡಿಬಂತು. ಧಾರ್ಮಿಕ ಕಾರ್ಯಕ್ರಮದ ಸಂಭ್ರಮದ ನಡುವೆ ಜೀವ ರಕ್ಷಕ ಆರೋಗ್ಯ ಮಾಹಿತಿಯನ್ನು ಜನ-ರಿಗೆ ತಲುಪಿಸಿದ ಈ ಪ್ರಯತ್ನವು ಸಾರ್ವಜನಿಕರಲ್ಲಿ ಉತ್ತಮ ಪ್ರತಿಕ್ರಿಯೆ ಮತ್ತು ಮೆಚ್ಚುಗೆಗೆ ಪಾತ್ರವಾಯಿತು. ಹಾವು ಕಡಿತವಾದಾಗ ಆತಂಕವಲ್ಲ, ತಕ್ಷಣ ಚಿಕಿತ್ಸೆ; ನಾಯಿ ಕಡಿತವಾದಾಗ ನಿರ್ಲಕ್ಷ್ಯವಲ್ಲ, ತಕ್ಷಣ ಲಸಿಕೆ; ಹೃದಯ ಸ್ತಂಭನವಾದಾಗ ವಿಳಂಬವಲ್ಲ, ತಕ್ಷಣ ಸಿಪಿಆರ್ ? ಪ್ರತಿಯೊಬ್ಬರೂ ಜೀವ ರಕ್ಷಕ ಆರೋಗ್ಯ ಜ್ಞಾನವನ್ನು ಹೊಂದಿರಬೇಕು ಎಂಬ ಸಂದೇಶವನ್ನು ಜನಸಾಮಾನ್ಯರಿಗೆ ತಲುಪಿಸುವುದಾಗಿತ್ತು. ಕಾರ್ಯಕ್ರಮದಲ್ಲಿ ಡಾ. ಹನುಮನಗೌಡ,ಡಾ. ವಿಜಯ ಕುಮಾರ್, ರಂಗನಾಥ್ ಗುಡಿ ಸಂಗನಗೌಡ ಮಾಲಿಪಾಟೀಲ್, ಗೀತಾ ಹಿರೇಮಠ್, ಕಸ್ತೂರಿ ಬೈರಾಮಟ್ಟಿ, ಸರಸ್ವತಿ, ಅಂಬಮ್ಮ,ಹನುಮಂತ ರೆಡ್ಡಿ,ಸೈಫಖಾನ್, ರವಿ, ಅಭಿಲಾಷ, ಅಯ್ಯನಗೌಡ,ಮಹೇಶ್, ಉದಯ, ವಿರೇಶ್,ಚಂದಭಾಷ್, ಮಲ್ಲಿಕಾರ್ಜುನ,ವಾಹನ ಚಾಲಕರು,ಡಿ ದರ್ಜೆ ನೌಕರರು, ವಿದ್ಯಾರ್ಥಿಗಳು ಆಶಾ ಕಾರ್ಯಕರ್ತೆಯರು, ಇತರರು ಉಪಸ್ಥಿತರಿದ್ದರು..

ನೇಮಕಾತಿ ಪ್ರಕಟಣೆ

ಶಿವಮೊಗ್ಗ ಮಹಾನಗರ ಪಾಲಿಕೆ ನೇಮಕಾತಿ 2026-45 ಪೌರಕಾರ್ಮಿಕ ಹುದ್ದೆಗಳಿಗೆ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ.

ISRO URSC ನೇಮಕಾತಿ 2026: 61 ಟೆಕ್ನಿಷಿಯನ್-ಬಿ (Technician-B) ಮತ್ತು ಚಾಲಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಖಖಖಔ ಯು.ಆರ್. ರಾವ್ ಸ್ಯಾಟಲೈಟ್ ಸೆಂಟರ್ (ISRO URSC), ಅಕ್ಟೋಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ಟೆಕ್ನಿಷಿಯನ್-ಬಿ ಮತ್ತು ಚಾಲಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕದ ಬೆಂಗಳೂರಿನಲ್ಲಿ ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 13-ನವೆಂಬರ್-2026 ರಂದು ಅಥವಾ ಅದಕ್ಕೂ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: isro.gov.in

ಜಾಲಹಳ್ಳಿಯಲ್ಲಿ ದಸರಾ ಹಬ್ಬದ ಪ್ರಯುಕ್ತ ರಾಜ್ಯಮಟ್ಟದ ಕಬಡ್ಡಿ ಪಂದ್ಯಾವಳಿ: ವಿಜಯಪುರ ತಂಡಕ್ಕೆ ಪ್ರಥಮ ಬಹುಮಾನ

ಕೊಪ್ಪಳ ತಂಡಕ್ಕೆ ದ್ವಿತೀಯ ಸ್ಥಾನ; ಆತಿಥೇಯ ಶ್ರೀ ದುರ್ಗಾದೇವಿ ಜಾಲಹಳ್ಳಿ ತಂಡಕ್ಕೆ ತೃತೀಯ ಸ್ಥಾನ

❑ ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದಲ್ಲಿ ದಸರಾ ಹಬ್ಬದ ಪ್ರಯುಕ್ತ ಶ್ರೀ ದುರ್ಗಾದೇವಿ ಕಮಿಟಿ ವತಿಯಿಂದ ಆಯೋಜಿಸಿದ್ದ ಎರಡನೇ ವರ್ಷದ ರಾಜ್ಯಮಟ್ಟದ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿ ಅ. 29ರಂದು ಯಶಸ್ವಿಯಾಗಿ ನಡೆಯಿತು.

ಪಂದ್ಯಾವಳಿಯನ್ನು ಶ್ರೀ ಕೊಪ್ರೇಶ್ ರಾವ್ ದೇಸಾಯಿ ಅವರು ರಿಬ್ಬನ್ ಕತ್ತರಿಸುವ ಮೂಲಕ ಉದ್ಘಾಟಿಸಿದರು. ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ ತಂಡಗಳು ಪಂದ್ಯಾವಳಿಯಲ್ಲಿ ಭಾಗವಹಿಸಿ ತಮ್ಮ ಕ್ರೀಡಾ ಸಾಮರ್ಥ್ಯ ಪ್ರದರ್ಶಿಸಿದವು. ರೋಚಕ ಹಣಾಹಣಿಯಿಂದ ಕೂಡಿದ್ದ ಪಂದ್ಯಾವಳಿಯಲ್ಲಿ ವಿಜಯಪುರ ತಂಡ ಪ್ರಥಮ ಸ್ಥಾನ ಪಡೆದು ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು. ಕೊಪ್ಪಳ ತಂಡ ದ್ವಿತೀಯ ಸ್ಥಾನ ಗಳಿಸಿದರೆ, ಆತಿಥೇಯ ಶ್ರೀ ದುರ್ಗಾದೇವಿ ಜಾಲಹಳ್ಳಿ ತಂಡ



ತೃತೀಯ ಸ್ಥಾನ ಪಡೆದುಕೊಂಡಿತು. ಐದು ತಂಡಗಳಿಗೆ ನಗದು ಬಹುಮಾನ ವಿತರಣೆ ಪಂದ್ಯಾವಳಿಯಲ್ಲಿ ವಿಜೇತ ತಂಡಗಳಿಗೆ ನಗದು ಬಹುಮಾನ ವಿತರಿಸಲಾಯಿತು. ಪ್ರಥಮ ಬಹುಮಾನ 15,000 ಅನ್ನು ಕೊಪ್ರೇಶ್ ರಾವ್ ಧಣಿ ದೇಸಾಯಿ, ದ್ವಿತೀಯ ಬಹುಮಾನ 10,000 ಅನ್ನು ಪ್ರತೀಕ್ ಪಾಟೀಲ್ ಜಾಲಹಳ್ಳಿ, ತೃತೀಯ ಬಹುಮಾನ 7,500 ಅನ್ನು ಗೋವಿಂದಪ್ಪ ಹಲಗೇರಿ, ಚತುರ್ಥ ಬಹುಮಾನ 5,000 ಅನ್ನು ಮುದಗೋಟದ ನಿರಂಜನ್ ವಕೀಲರು ಹಾಗೂ ಪಂಚಮ ಬಹುಮಾನ ?2,500 ಅನ್ನು ದೇವದುರ್ಗ ಬಿಜೆಪಿ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಹಾಗೂ ಗ್ರಾಮ ಪಂಚಾಯಿತಿ ಸದಸ್ಯ ಅಬ್ದುಲ್ ರೆಹಮಾನ್ ಚೌದ್ರಿ ಅವರು ಪ್ರಾಯೋಜಿಸಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಅಬ್ದುಲ್ ರೆಹಮಾನ್ ಚೌದ್ರಿ ಅವರು, ಗ್ರಾಮೀಣ ಕ್ರೀಡಾಕೂಟಗಳನ್ನು ಇಂದಿನ ದಿನಗಳಲ್ಲಿ ಉಳಿಸಿ ಬೆಳೆಸುವ ಅಗತ್ಯವಿದೆ. ಯುವಕರು ಮೊಬೈಲ್ ಬಳಕೆ ಹಾಗೂ ಪಾನ್ ಮಸಾಲದಂತಹ ದುಶ್ಚಟಗಳಿಂದ ದೂರವಿದ್ದು, ಕ್ರೀಡೆ ಮತ್ತು ದೈಹಿಕ ಚಟುವಟಿಕೆಗಳಲ್ಲಿ ಹೆಚ್ಚು ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಶಿವರಾಜ್ ಸಾಹುಕಾರ್ ಪಾಣಿ ಅಧ್ಯಕ್ಷತೆ ಪಂದ್ಯಾವಳಿಯ ಅಧ್ಯಕ್ಷತೆಯನ್ನು ಶಿವರಾಜ್ ಸಾಹುಕಾರ್ ಪಾಣಿ ವಹಿಸಿದ್ದರು. ಈ ಸಂದರ್ಭದಲ್ಲಿ ಕೊಪ್ರೇಶ್ ರಾವ್ ದೇಸಾಯಿ, ಶಿವರಾಜ್ ಪಾಣಿ ಸಾಹುಕಾರ್, ಕ್ಲಾಸ್-1 ಗುತ್ತಿಗೆದಾರರು, ರಾಜಾ ವಾಸುದೇವ ನಾಯಕ ವಕೀಲರು, ನಿರಂಜನ್ ವಕೀಲರು, ವೀರೇಶ್ ಅರಕೇರಿ, ಗ್ರಾಮ ಪಂಚಾಯಿತಿ ಉಪಾಧ್ಯಕ್ಷರು, ವಿನೋದ್ ಕುಮಾರ್ ಚಿಕ್ಕಲ್, ಲಿಂಗಪ್ಪ ಎನ್., ಎಂ.ಎಸ್. ಪಾಟೀಲ್, ಯಲ್ಲಪ್ಪ ಗಚ್ಚಿನಮನೆ, ಹುಲುಗಪ್ಪ, ಹನುಮಂತರಾಯ ನೆಲ್ಲಿಂಗಿ, ಮಲ್ಲಿಕಾರ್ಜುನ್ ತಂದೆ ನಾಗಪ್ಪ ಹಡಪದ್, ರಮೇಶ್ ಸಾಲಿ, ವೀರೇಶ್ ಗೌಳಿ, ವೆಂಕಟೇಶ್ ಕಟ್ಟಿಮನಿ, ಸಿದ್ದರಾಮ್, ತಿರುಪತಿ ಹಡಪದ್, ಬಾಲಪ್ಪ ಲಿಂಗದಳ್ಳಿ ಹಾಗೂ ಮಲ್ಲಿಕಾರ್ಜುನ್ ಭಜಂತ್ರಿ ಸೇರಿದಂತೆ ಹಲವು ಗಣ್ಯರು ಮತ್ತು ಕ್ರೀಡಾಭಿಮಾನಿಗಳು ಉಪಸ್ಥಿತರಿದ್ದರು.

ಸೋಮನಮರಡಿ ಗ್ರಾ.ಪಂ. ವ್ಯಾಪ್ತಿಯ ಗ್ರಾಮಗಳ ತಾಲೂಕು ಬದಲಾವಣೆಗೆ ನ. 3ರಂದು ಗ್ರಾಮಸಭೆ

❑ ನೈಜ್ಯ ದೆಸೆ ನ್ಯೂಸ್

ದೇವದುರ್ಗ: ರಾಯಚೂರು ಜಿಲ್ಲೆಯ ಅರಕೇರಾ ತಾಲೂಕಿಗೆ ಒಳಪಡುವ ಸೋಮನಮರಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳನ್ನು ಅರಕೇರಾ ತಾಲೂಕಿನಲ್ಲಿ ಮುಂದುವರಿಸಬೇಕೇ ಅಥವಾ ದೇವದುರ್ಗ ತಾಲೂಕಿಗೆ ಸೇರ್ಪಡೆಗೊಳಿಸಬೇಕೇ ಎಂಬ ಕುರಿತು ಗ್ರಾಮಸ್ಥರ ಅಭಿಪ್ರಾಯ ಸಂಗ್ರಹಿಸಲು ನವೆಂಬರ್ 3ರಂದು ಗ್ರಾಮಸಭೆ ಆಯೋಜಿಸಲಾಗಿದೆ.



ಈ ಕುರಿತು ಅರಕೇರಾ ತಹಶೀಲ್ದಾರರ ಕಚೇರಿಯಿಂದ ಅಕ್ಟೋಬರ್ 28ರಂದು ಅಧಿಕೃತ ಸಭೆಯ ಸೂಚನಾ ಪತ್ರ ಹೊರಡಿಸಲಾಗಿದೆ. ಸೋಮನಮರಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಸ್ಥರು ಅಕ್ಟೋಬರ್ 12ರಂದು ಸಲ್ಲಿಸಿದ ಮನವಿಗೆ ಸ್ಪಂದಿಸಿರುವ ಜಿಲ್ಲಾಡಳಿತ, ಅರಕೇರಾ ತಹಶೀಲ್ದಾರರು ಹಾಗೂ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದಲ್ಲಿ ಗ್ರಾಮಸಭೆ ನಡೆಸಲು ಕ್ರಮ ಕೈಗೊಂಡಿದೆ.

ನವೆಂಬರ್ 3ರಂದು ಬೆಳಿಗ್ಗೆ 11 ಗಂಟೆಗೆ ಸೋಮನಮರಡಿ ಗ್ರಾಮ ಪಂಚಾಯಿತಿ ಕಾರ್ಯಾಲಯದಲ್ಲಿ ಗ್ರಾಮಸಭೆ ನಡೆಯಲಿದ್ದು, ತಾಲೂಕು ಬದಲಾವಣೆಯ ಕುರಿತು ಗ್ರಾಮಸ್ಥರ ಅಭಿಪ್ರಾಯಗಳನ್ನು ಸಂಗ್ರಹಿಸಲಾಗುತ್ತದೆ. ಆದ್ದರಿಂದ ಸೋಮನಮರಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಎಲ್ಲ ಗ್ರಾಮಗಳ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮಸಭೆಯಲ್ಲಿ ಭಾಗವಹಿಸಿ, ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸಬೇಕೆಂದು ತಹಶೀಲ್ದಾರರ ಕಚೇರಿ ಮನವಿ ಮಾಡಿದೆ.

ತಾಳಿಕೋಟಿಯಲ್ಲಿ ಇಂದು ತಾಲೂಕು ಆಡಳಿತದಿಂದ ಅದ್ದೂರಿ ಕನ್ನಡ ರಾಜ್ಯೋತ್ಸವ ಆಚರಣೆ

❑ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಪಟ್ಟಣದಲ್ಲಿ ತಾಲೂಕು ಆಡಳಿತದ ವತಿಯಿಂದ ಇಂದು ಕನ್ನಡ ರಾಜ್ಯೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಹಾಗೂ ಸಡಗರ ಸಂಭ್ರಮದಿಂದ ಆಚರಿಸಲು ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ.

ಕಾರ್ಯಕ್ರಮದ ಅಂಗವಾಗಿ ಬೆಳಿಗ್ಗೆ 8.30ಕ್ಕೆ ಶ್ರೀ ಭುವನೇಶ್ವರಿ ದೇವಿಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು. ನಂತರ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಕನ್ನಡ ನಾಡು, ನುಡಿ, ಸಂಸ್ಕೃತಿಯನ್ನು ಬಿಂಬಿಸುವ ಭವ್ಯ ಮೆರವಣಿಗೆ ನಡೆಯಲಿದೆ. ತದನಂತರ ಪಟ್ಟಣದ ಸರ್ಕಾರಿ ಕನ್ನಡ ಮಾದರಿ ಪ್ರಾಥಮಿಕ ಶಾಲೆಯ ಆವರಣದಲ್ಲಿ ವೇದಿಕೆ ಕಾರ್ಯಕ್ರಮ ಜರುಗಲಿದೆ. ಕೆ-ಎಸ್‌ಡಿಎಲ್ ಅಧ್ಯಕ್ಷರು ಹಾಗೂ ಶಾಸಕರಾದ ಅಪ್ಪಾಜಿ ನಾಡಗೌಡ ಅವರ ಅಧ್ಯಕ್ಷತೆಯಲ್ಲಿ



ನಡೆಯುವ ಕಾರ್ಯಕ್ರಮಕ್ಕೆ ದೇವರ ಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ ಅವರು ಸಹ ಅಧ್ಯಕ್ಷತೆ ವಹಿಸಲಿದ್ದಾರೆ.

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರು ಮತ್ತು ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಂ.ಬಿ. ಪಾಟೀಲ ಅವರು ಘನ ಉಪಸ್ಥಿತಿ ವಹಿಸಲಿದ್ದಾರೆ. ತಾಳಿಕೋಟಿ ತಹಸೀಲ್ದಾರ್ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಅಧ್ಯಕ್ಷರಾದ ಎಂ.ಎಸ್. ಅರಕೇರಿ ಅವರು ಧ್ವಜಾರೋಹಣ ನೆರವೇರಿಸಲಿದ್ದಾರೆ.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯ ರವಿಕುಮಾರ್ ಎನ್., ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಬಿ. ಹುಕ್ಕೇರಿ, ವಿಜಯಪುರ ಸಂಸದ ರಮೇಶ ಚಂ. ಜಿಗಜಿಣಗಿ, ರಾಜ್ಯಸಭಾ ಸದಸ್ಯೆ ಡಾ. ಸುಧಾ ಮೂರ್ತಿ, ವಿಧಾನ ಪರಿಷತ್ ಸದಸ್ಯರಾದ ಹಣಮಂತ ನಿರಾಣಿ, ಸುನೀಲಗೌಡ ಪಾಟೀಲ, ಪಿ.ಎಚ್. ಪೂಜಾರ, ಕೇಶವ ಪ್ರಸಾದ ಎಸ್., ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ಅಧ್ಯಕ್ಷೆ ಕಾಂತಾ ನಾಯಕ್, ಕರ್ನಾಟಕ ಬಾಲ ವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ, ಕರ್ನಾಟಕ ನಿಂಬೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಬಿ.ಎಸ್. ಕವಲಗಿ, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಸಂಗಮೇಶ ದೇಸಾಯಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಆರ್.ಎಲ್. ಕೊಪ್ಪದ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ.

ಈ ಸಂದರ್ಭದಲ್ಲಿ ಡಾ. ಅನೀಲಕುಮಾರ ಬಿ. ಇರಾಜ ಅವರು ವಿಶೇಷ ಉಪನ್ಯಾಸ ನೀಡಲಿದ್ದಾರೆ. ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಅನಸೂಯಾ ಚಲವಾದಿ, ಕ್ಷೇತ್ರ ಶಿಕ್ಷಣಾಧಿಕಾರಿ ಎಂ. ಎಸ್. ಬಡದಾನಿ, ಪುರಸಭೆ ಮುಖ್ಯಾಧಿಕಾರಿ ಸುನೀಲ ಪಾಟೀಲ ಹಾಗೂ ಸಿಪಿಐ ಮೊಹಮ್ಮದ್ ಫಸಿವುದ್ದೀನ್ ಅವರು ವೇದಿಕೆಯಲ್ಲಿ ಉಪಸ್ಥಿತರಿರಲಿದ್ದಾರೆ. ಕನ್ನಡ ನಾಡಿನ ಹಿರಿಮೆ, ಭಾಷೆ, ಸಂಸ್ಕೃತಿ ಹಾಗೂ ಪರಂಪರೆಯನ್ನು ಸಾರುವ ಈ ನಾಡಹಬ್ಬದಲ್ಲಿ ಸಾರ್ವಜನಿಕರು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ವಿದ್ಯಾರ್ಥಿಗಳು ಹಾಗೂ ಕನ್ನಡಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ತಾಲೂಕು ಆಡಳಿತ ಪ್ರಕಟಣೆಯಲ್ಲಿ ಮನವಿ ಮಾಡಿದೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ಬೆಳೆಗಳ ರಕ್ಷಣೆಗೆ ಜನವರಿವರೆಗೆ ಕಾಲುವೆ ನೀರು ಹರಿಸಲು ಆಗ್ರಹ: ಶಾಸಕಿ ಕರೆಮ್ಮ ಜಿ. ನಾಯಕ

❑ ನೈಜ್ಯ ದೆಸೆ ನ್ಯೂಸ್

ದೇವದುರ್ಗ: ನಾರಾಯಣಪುರ ಬಲದಂಡೆ ಕಾಲುವೆ ವ್ಯಾಪ್ತಿಯಲ್ಲಿ ಬೆಳೆದಿರುವ ಬೆಳೆಗಳಿಗೆ ನೀರಿನ ಅಭಾವ ಎದುರಾಗಿದ್ದು, ರೈತರ ಪರಿಸ್ಥಿತಿ ಗಂಭೀರವಾಗಿದೆ. ಕೈಗೆ ಬಂದ ತುತ್ತು ಬಾಯಿಗೆ ಬಾರದಂತಹ ಸ್ಥಿತಿ ನಿರ್ಮಾಣವಾಗುವ ಆತಂಕ ಎದುರಾಗಿದೆ. ಹೀಗಾಗಿ ಜನವರಿ ತಿಂಗಳವರೆಗೆ ಕಾಲುವೆಗಳಿಗೆ ನೀರು ಹರಿಸುವಂತೆ ಒತ್ತಾಯಿಸಿ

ನವೆಂಬರ್ 16ರಂದು ಸಿರವಾರ ಕ್ರಾಸ್ ಬಳಿ ಜೆಡಿಎಸ್ ಪಕ್ಷದ ವತಿಯಿಂದ ಬೃಹತ್ ರ್ಯಾಲಿ ಹಾಗೂ ರಸ್ತೆ ತಡೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಶಾಸಕಿ ಕರೆಮ್ಮ ಜಿ. ನಾಯಕ ತಿಳಿಸಿದರು.

ಪಟ್ಟಣದ ಜೆಡಿಎಸ್ ಕಚೇರಿಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರಿನಲ್ಲಿ ನಡೆದ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಮುಂಗಾರು ಬೆಳೆಗಳ ರಕ್ಷಣೆಗೆ ಅಗತ್ಯ ಪ್ರಮಾಣದ ನೀರು ಹರಿಸುವ ಭರವಸೆ ನೀಡಲಾಗಿತ್ತು. ಆದರೆ, ನವೆಂಬರ್ 12ರಿಂದಲೇ ಕಾಲುವೆಗೆ ನೀರು ಸ್ಥಗಿತಗೊಳಿಸುವ ನಿರ್ಧಾರ ಕೈಗೊಳ್ಳಲಾಗಿದೆ. ಇದರಿಂದ ರೈತರು ಸಂಕಷ್ಟಕ್ಕೆ ಸಿಲುಕುವಂತಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ದೇವದುರ್ಗ ಮತ್ತು ಅರಕೇರಾ ತಾಲೂಕು ವ್ಯಾಪ್ತಿಯಲ್ಲಿ ಸುಮಾರು 70 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಹತ್ತಿ, 30 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಹಾಗೂ 6 ಸಾವಿರಕ್ಕೂ ಹೆಚ್ಚು ಹೆಕ್ಟೇರ್ ಪ್ರದೇಶದಲ್ಲಿ ಮೆಣಸಿನಕಾಯಿ ಬೆಳೆ ಬೆಳೆಯಲಾಗಿದೆ. ಹತ್ತಿ ಬೆಳೆ ಕಟಾವಿನ ಹಂತದಲ್ಲಿದ್ದರೆ, ಭತ್ತದ ಬೆಳೆಗೆ ಕನಿಷ್ಠ ಡಿಸೆಂಬರ್ ತಿಂಗಳವರೆಗೆ ನೀರಿನ ಅವಶ್ಯಕತೆಯಿದೆ. ಮೆಣಸಿನಕಾಯಿ ಬೆಳೆಗೆ ಜನವರಿವರೆಗೂ ನೀರು ಅತ್ಯಗತ್ಯವಾಗಿದೆ ಎಂದು ವಿವರಿಸಿದರು.

ಮೆಣಸಿನಕಾಯಿ ಬೆಳೆಯಲು ರೈತರು ಪ್ರತಿ ಎಕರೆಗೆ ಸುಮಾರು ಒಂದು ಲಕ್ಷ ರೂಪಾಯಿ ವೆಚ್ಚ ಮಾಡಿದ್ದು, ಕೆಲವರು 10ರಿಂದ 20 ಎಕರೆ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ಪಡೆದು ಬೆಳೆ ಬೆಳೆದಿದ್ದಾರೆ. ಡಿಸೆಂಬರ್ ಮತ್ತು ಜನವರಿ ತಿಂಗಳಲ್ಲಿ ಫಸಲು ಬರುವ ನಿರೀಕ್ಷೆಯಿದೆ. ಈ ಸಂದರ್ಭದಲ್ಲಿ ನೀರಿನ ಕೊರತೆ ಉಂಟಾದರೆ ರೈತರಿಗೆ ಕೋಟ್ಯಂತರ ರೂಪಾಯಿ ನಷ್ಟವಾಗುವ ಸಾಧ್ಯತೆಯಿದ್ದು, ಬೆಳೆಗಾರರು ಆತಂಕದಲ್ಲಿದ್ದಾರೆ ಎಂದು ಹೇಳಿದರು.



ಜೆಡಿಎಸ್ ಪಕ್ಷ ರೈತರ ಹಿತಾಸಕ್ತಿ ಕಾಪಾಡಲು ಬದ್ಧವಾಗಿದೆ. ಈ ಹಿನ್ನೆಲೆಯಲ್ಲಿ ನವೆಂಬರ್ 7ರಿಂದ 11ರವರೆಗೆ 11 ಕಡೆಗಳಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರೈತರೊಂದಿಗೆ ಸಭೆಗಳನ್ನು ಆಯೋಜಿಸಲಾಗಿದೆ. ರೈತರ ಸಮಸ್ಯೆಗಳು ಹಾಗೂ ಬೆಳೆಗಳ ಸ್ಥಿತಿಗತಿಗಳ ಕುರಿತು ಮಾಹಿತಿ ಸಂಗ್ರಹಿಸಿ ಜಿಲ್ಲಾಡಳಿತದ ಗಮನಕ್ಕೆ ತರಲಾಗುವುದು ಎಂದರು. ಈಗಾಗಲೇ ನೀರಿನ ಅಗತ್ಯತೆ ಮತ್ತು ಸಂಭವಿಸಬಹುದಾದ ಬೆಳೆಹಾನಿಯ ಕುರಿತು ಮಾಹಿತಿ ನೀಡುವಂತೆ ನೀರಾವರಿ ಹಾಗೂ ಕೃಷಿ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಅಧಿಕಾರಿಗಳು ವಾರದೊಳಗೆ ವರದಿ ಸಲ್ಲಿಸಲಿದ್ದಾರೆ. ರೈತರಿಂದ ಸಂಗ್ರಹಿಸಿದ ಮಾಹಿತಿ ಹಾಗೂ ಅಧಿಕಾರಿಗಳ ವರದಿಯನ್ನು ಆಧರಿಸಿ ನೀರಾವರಿ ಸಲಹಾ ಸಮಿತಿ ಸಭೆ ಮತ್ತು ಚಳಿಗಾಲದ ಅಧಿವೇಶನದಲ್ಲಿ ಸರ್ಕಾರದ ಗಮನ ಸೆಳೆಯಲಾಗುವುದು ಎಂದು ತಿಳಿಸಿದರು.

ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ ಎಂಬುದನ್ನು ಮುಖ್ಯಮಂತ್ರಿಗಳೇ ತಮ್ಮ ಹೇಳಿಕೆಗಳ ಮೂಲಕ ಒಪ್ಪಿಕೊಂಡಿದ್ದಾರೆ. ಬರಗಾಲ ಘೋಷಣೆ ಮಾಡಲಾಗಿದೆಯೇ ಹೊರತು, ರೈತರಿಗೆ ಪರಿಹಾರ ಹಾಗೂ ಇತರೆ ಸೌಲಭ್ಯಗಳು ಸಮರ್ಪಕವಾಗಿ ತಲುಪಿಲ್ಲ. ಇಂತಹ ಅಧೋಗತಿಯ ಸರ್ಕಾರವನ್ನು ರಾಜ್ಯ ಹಿಂದೆಂದೂ ಕಂಡಿರಲಿಲ್ಲ ಎಂದು ಶಾಸಕಿ ಕರೆಮ್ಮ ಜಿ. ನಾಯಕ ರಾಜ್ಯ ಸರ್ಕಾರದ ವಿರುದ್ಧ ಟೀಕಾಪ್ರಹಾರ ನಡೆಸಿದರು.

ಸುದ್ದಿಗೋಷ್ಠಿಯಲ್ಲಿ ದೇವದುರ್ಗ ತಾಲೂಕು ಜೆಡಿಎಸ್ ಅಧ್ಯಕ್ಷ ಬಸನಗೌಡ ದೇಸಾಯಿ, ಅರಕೇರಾ ತಾಲೂಕು ಅಧ್ಯಕ್ಷ ಸಿದ್ದಣ್ಣ ಬಿ. ಗಣೇಕಲ್, ಮುಖಂಡರಾದ ಶರಣಪ್ಪ ಬಳೆ, ಅಮರೇಶ ಪಾಟೀಲ್ ಪರ್ತಾಪೂರ, ಹನುಮಂತ್ರಾಯ ನಾಯಕ ಚಿಂತಲಕುಂಟಿ, ಚನ್ನಪ್ಪ ಮಸೀದಪೂರ, ಇತರರು ಉಪಸ್ಥಿತರಿದ್ದರು.

ಲಿಂಗದಹಳ್ಳಿಯಲ್ಲಿ ಕಾಶಿ ಜಗದ್ಗುರುಗಳಿಂದ ಇಷ್ಟಲಿಂಗ ಮಹಾಪೂಜೆ

ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ, ಧಾರ್ಮಿಕ ಮೌಲ್ಯ ಕಲಿಸುವುದು ಪೋಷಕರ ಕರ್ತವ್ಯ: ಕಾಶಿ ಜಗದ್ಗುರು

❑ ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಸಮೀಪದ ಲಿಂಗದಹಳ್ಳಿ ಗ್ರಾಮದ ಶ್ರೀ ಪರಮಾನಂದ ದೇವಸ್ಥಾನದ ಆವರಣದಲ್ಲಿ ಶುಕ್ರವಾರ ಕಾಶಿ ಜಗದ್ಗುರು ಧರ್ಮರತ್ನ ಡಾ. ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ಇಷ್ಟಲಿಂಗ ಮಹಾಪೂಜೆ ಹಾಗೂ ಧಾರ್ಮಿಕ ಸಭೆ ಭಕ್ತಿಭಾವದಿಂದ ಅದ್ದೂರಿಯಾಗಿ ಜರುಗಿತು.

ಇಷ್ಟಲಿಂಗ ಮಹಾಪೂಜೆ ನೆರವೇರಿಸಿದ ಕಾಶಿ ಜಗದ್ಗುರುಗಳು ಭಕ್ತರನ್ನು ಉದ್ದೇಶಿಸಿ ಆಶೀರ್ವಚನ ನೀಡಿದರು. ಮಕ್ಕಳಿಗೆ ಕೇವಲ ಶಿಕ್ಷಣ ನೀಡಿದರೆ ಸಾಲದು, ಅದರೊಂದಿಗೆ ಉತ್ತಮ ಸಂಸ್ಕೃತಿ, ಸಂಸ್ಕಾರ ಹಾಗೂ ಧಾರ್ಮಿಕ ಮೌಲ್ಯಗಳನ್ನು ಕಲಿಸುವುದು ಪ್ರತಿಯೊಬ್ಬ ಪೋಷಕರ ಕರ್ತವ್ಯವಾಗಿದೆ ಎಂದು ಹೇಳಿದರು. ಇಷ್ಟಲಿಂಗ ಪೂಜೆ ಕೇವಲ ಬಾಹ್ಯ ಆಚರಣೆಯಲ್ಲ. ಅದು ನಮ್ಮೊಳಗಿನ ದೇವರನ್ನು ಕಾಣುವ ಕನ್ನಡಿಯಾಗಿದ್ದು, ಮನಸ್ಸನ್ನು ಶುದ್ಧೀಕರಿಸಿ ಏಕಾಗ್ರತೆಯನ್ನು ಹೆಚ್ಚಿಸುವ ಶಕ್ತಿಯನ್ನು ಹೊಂದಿದೆ. ವೀರಶೈವ ಲಿಂಗಾಯತ ಧರ್ಮದ ಮೂಲ ಆಶಯಗಳನ್ನು ಅರಿತು ಪ್ರತಿಯೊಬ್ಬರೂ ನಿತ್ಯ ಜೀವನದಲ್ಲಿ ಇಷ್ಟಲಿಂಗ ಪೂಜೆಯನ್ನು ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಶ್ರೀ ಪರಮಾನಂದ ದೇವಸ್ಥಾನ ಅತ್ಯಂತ ಪವಿತ್ರ ಕ್ಷೇತ್ರ ಹಾಗೂ ಶಕ್ತಿ ಕೇಂದ್ರವಾಗಿದೆ. ಇಲ್ಲಿ ಶಿವ-ಪಾರ್ವತಿಯರು ನೆಲೆಸಿದ್ದು, ಮುಂದಿನ



ದಿನಗಳಲ್ಲಿ ಈ ಕ್ಷೇತ್ರ ಪ್ರಸಿದ್ಧ ಧಾರ್ಮಿಕ ಕೇಂದ್ರವಾಗಿ ಬೆಳೆಯಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ದೇವಾಪುರದ ಶ್ರೀಗಳು ಸತತ ಒಂಬತ್ತು ದಿನಗಳ ಕಾಲ ಮೌನವ್ರತ ಆಚರಿಸುವ ಮೂಲಕ ಕಠಿಣ ತಪಸ್ಸು ಕೈಗೊಂಡಿದ್ದು, ಅವರ ತಪಸ್ಸಿಗೆ ಗ್ರಾಮಸ್ಥರೆಲ್ಲರೂ ಸಹಕಾರ ನೀಡಿರುವುದು ಶ್ಲಾಘನೀಯ. ಇಂತಹ ಧಾರ್ಮಿಕ ಕಾರ್ಯಗಳು ಸಮಾಜದಲ್ಲಿ ಶಾಂತಿ, ಸಾಮರಸ್ಯ ಹಾಗೂ ಭಕ್ತಿಭಾವವನ್ನು ಹೆಚ್ಚಿಸುತ್ತವೆ ಎಂದರು.

ಜಯಶಾಂತಲಿಂಗೇಶ್ವರ ಮಹಾಸ್ವಾಮಿಗಳು ಮಾತನಾಡಿ, ಲಿಂಗದಹಳ್ಳಿ ಬೆಟ್ಟವು 68 ಎಕರೆ ವಿಸ್ತೀರ್ಣ ಹೊಂದಿದ್ದು, ಇಂತಹ ಪುಣ್ಯಭೂಮಿಗೆ ಕಾಶಿ ಜಗದ್ಗುರುಗಳ ಪಾದಸ್ಪರ್ಶವಾಗಿರುವುದು ಭಕ್ತರ ಸೌಭಾಗ್ಯ. ಇದರಿಂದ ಲಿಂಗದಹಳ್ಳಿ, ಜಾಲಹಳ್ಳಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಜನರಿಗೆ ಆಧ್ಯಾತ್ಮಿಕ ಪ್ರೇರಣೆ ದೊರೆಯಲಿದೆ ಎಂದು ಹೇಳಿದರು.

ಗುರುವಾರ ಸಂಜೆ ಗ್ರಾಮಕ್ಕೆ ಆಗಮಿಸಿದ ಕಾಶಿ ಜಗದ್ಗುರುಗಳನ್ನು ನೂರಾರು ಸುಮಂಗಲಿಯರು ಕುಂಭಕಳಸ ಹೊತ್ತು, ಸಾರೋಟಿನಲ್ಲಿ ಮೆರವಣಿಗೆ ಮೂಲಕ ಭಕ್ತಿಪೂರ್ವಕವಾಗಿ ಸ್ವಾಗತಿಸಿದರು. ಬಳಿಕ ಇಷ್ಟಲಿಂಗ ಪೂಜೆ, ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಹಾಗೂ ಧರ್ಮಸಭೆ ಜರುಗಿದವು.

ವಿವಿಧ ಮಠಗಳ ಮಠಾಧೀಶರು, ಶಿವಯೋಗಿಗಳು ಭಾಗಿ* ಕಾರ್ಯಕ್ರಮದಲ್ಲಿ ಜಾಲಹಳ್ಳಿಯ ಬೃಹನ್ಮಠದ ಶ್ರೀ ಷ.ಬ್ರ. ವಿದ್ಯಾಮಾನ್ಯ ಶಿವಾಭಿನವ ಶಿವಾಚಾರ್ಯರತ್ನ ಜಯಶಾಂತಲಿಂಗೇಶ್ವರ ಶಿವಾಚಾರ್ಯರು, ದೇವಾಪುರದ ಸಂಸ್ಥಾನಮಠದ ಶ್ರೀ ಷ.ಬ್ರ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು, ದೇವರಭೂಪುರದ ಶ್ರೀ ಷ.ಬ್ರ. ಅಭಿನವ ಗಜದಂಡ ಶಿವಾಚಾರ್ಯ ಮಹಾಸ್ವಾಮಿಗಳು, ಗಬ್ಬೂರಿನ ಮಹಾಸಂಸ್ಥಾನಮಠದ ಶ್ರೀ ಷ.ಬ್ರ. ಬೂದಿಬಸವ ಶಿವಾಚಾರ್ಯ ಮಹಾಸ್ವಾಮಿಗಳು, ಸುಲ್ತಾನಪುರದ ಪಂಚಾಕ್ಷರಿ ಮಹಾಸಂಸ್ಥಾನ ತೀರ್ಥ ಬೃಹನ್ಮಠದ ಶ್ರೀ ಷ.ಬ್ರ. ಶಂಭುಸೋಮನಾಥ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ಗುಂಡಕನಾಳದ ಹಿರೇಮಠದ ಶ್ರೀ ಷ.ಬ್ರ. ಗುರುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಸೇರಿದಂತೆ ವಿವಿಧ ಮಠಗಳ ಪೂಜ್ಯರು ಭಾಗವಹಿಸಿದ್ದರು.

ಅಲ್ಲದೆ, ಶ್ರೀ ಪರಮಪೂಜ್ಯ ಮುರುಗೇಂದ್ರ ಶಿವಯೋಗಿಗಳು, ಯರಡೋಣಿ ಕ್ರಾಸ್‌ನ ಶ್ರೀ ಸಿದ್ಧರಾಮೇಶ್ವರ ಗುರುಮಠದವರು, ಮಲದಕಲ್‌ನ ಶ್ರೀ ನಿಜಾನಂದ ಯೋಗಾಶ್ರಮದ ಶ್ರೀ ಗುರುಬಸವ ರಾಜಗುರು, ಶ್ರೀ ಅವಧೂತ ರಾಜಯೋಗಿ ಸಂತ ನಾಮದೇವಗೌಡ, ಮುದರಕಲ್‌ನ ಅಂಬಾಮಠದ ಶರಣರು ಹಾಗೂ ಮುಂಡರಗಿಯ ಶ್ರೀ ಶಿವಣ್ಣ ತಾತನವರು ಸೇರಿದಂತೆ ಹಲವು ಧಾರ್ಮಿಕ ಮುಖಂಡರು ಮತ್ತು ಶಿವಯೋಗಿಗಳು ಉಪಸ್ಥಿತರಿದ್ದರು. ದೇವದುರ್ಗ, ಅರಕೇರಾ, ಸುರಪುರ ಹಾಗೂ ಹುಣಸಗಿ ಭಾಗಗಳ ರಾಜಕೀಯ ಮುಖಂಡರು, ವಿವಿಧ ಸಂಸ್ಥೆಗಳ ಅಧ್ಯಕ್ಷರು, ತಾಲೂಕು ಮಟ್ಟದ ಅಧಿಕಾರಿಗಳು, ಪೊಲೀಸ್ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಪತ್ರಿಕಾ ಮತ್ತು ಮಾಧ್ಯಮ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಧಾರ್ಮಿಕ ಸೇವೆ ಸಲ್ಲಿಸಿದ ಭಕ್ತರು* ಕಾರ್ಯಕ್ರಮದ ಅಂಗವಾಗಿ ಕಸ್ತೂರೆಮ್ಮ ವೆಂಕಟರಾಯ ಬೆನಕನ್ ಕಕ್ಕಲದೊಡ್ಡಿ ಅವರು ಶಿವಾಚಾರ್ಯರಿಗೆ ಭಕ್ತಿಕಾಣಿಕೆ ಸಲ್ಲಿಸಿದರು. ಕೃತಿಕಾ ಸಂಜೀವರಡ್ಡಿ ಸಾಹುಕಾರ ಮಾಡಬಾಳ (ಸಾಯಿ ವೆಂಕಟರಮಣ ಟ್ರೇಡರ್ಸ್, ಜಾಲಹಳ್ಳಿ) ಅವರು ಅನ್ನದಾಸೋಹ ಸೇವೆ ಸಲ್ಲಿಸಿದರು. ಶಂಕ್ರಮ್ಮ ಅಮರಣ್ಣ ಶೆಲ್ಲಿ (ಲಿಂಗದಹಳ್ಳಿ) ಅವರು ಭಕ್ತಿಕಾಣಿಕೆ ಸಮರ್ಪಿಸಿದರು.

ಪ್ರಭಾವತಿ ಗುರುನಾಥ ಸೌದ್ರಿ ಅವರಿಂದ ವೀರಗಾಸೆ ಸೇವೆ ನೆರವೇರಿತು. ಜಾಲಹಳ್ಳಿ?ಹೇಮನಾಳ ವೀರಗಾಸೆ ಕಲಾತಂಡ ಹರಿಹರ ಕಲಾ ಸೇವೆ ಸಲ್ಲಿಸಿತು. ಅರ್ಪಿತಾ ಹಣಮಂತರಡ್ಡಿ ಕಕ್ಕಲದೊಡ್ಡಿ (ಶ್ರೀ ಜಿ.ಬಿ. ಮೆಟಲ್ಸ್, ದೇವದುರ್ಗ) ಅವರು ಕುಂಭ ಸೇವೆ ಸಲ್ಲಿಸಿದರು. ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ವೀರಣ್ಣ ಸಾಹು ಹಾಗೂ ಜಾಲಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಹನುಮಂತಿ ಶಿವಬಸಪ್ಪ ರಾಮ ಪಾಳಿ ಅವರು ಕಾರ್ಯಕ್ರಮದ ಸೇವಾ ಕಾರ್ಯಗಳಲ್ಲಿ ಭಾಗಿಯಾದರು.

ಶಿವಣ್ಣ ಹೊಸೂರು (ಲಿಂಗದಹಳ್ಳಿ) ಅವರು ಸಾರೋಟು ಮತ್ತು ಕಣಿಹಲಿಗಿ ಸೇವೆ ಸಲ್ಲಿಸಿದರು. ಪಿ. ಮಹಾದೇವಿ ಶ್ರೀನಿವಾಸ ರೆಡ್ಡಿ (ಲಿಂಗದಹಳ್ಳಿ) ಅವರು ವಿಶೇಷ ಸೇವೆ ಹಾಗೂ ನೀಲಮ್ಮ ವಿಶ್ವನಾಥ ಕೋಟೆ (ಲಿಂಗದಹಳ್ಳಿ) ಅವರು ಪೂಜೆಯ ಹೂವಿನ ಸೇವೆ ನೆರವೇರಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಆಕಾಶವಾಣಿ ಕಲಾವಿದ ಅಮರಯ್ಯ ಸ್ವಾಮಿ ಜಾಲಿಬೆಂಚಿ ಹಾಗೂ ದೇವದುರ್ಗದ ಮುಖ್ಯ ಕಾರ್ಯನಿರ್ವಾಹಕರಾದ ಸುಲೋಚನಾ ಎಸ್. ನಿರ್ವಹಿಸಿದರು. ಜಾಲಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಂದ ಅಪಾರ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಿ ಇಷ್ಟಲಿಂಗ ಮಹಾಪೂಜೆಯಲ್ಲಿ ಪಾಲ್ಗೊಂಡು ಕಾಶಿ ಜಗದ್ಗುರುಗಳ ಆಶೀರ್ವಾದ ಪಡೆದರು.

ವಚನ ದರ್ಶನ

ಸಂಸಾರಸಾಗರದ ತೆರೆ ಕೊಬ್ಬಿ ಮುಖದ ಮೇಲೆ ಅಲೆವುತ್ತಲಿದೆ.
ಅದಕ್ಕೆ ಅಂಜುವೆ, ಎಂಜಲನೆಂಬೆ.ಭವಭಂಗವ ಮಾಡಿ ಕಾಯೋ
ಕೂಡಲಸಂಗಮದೇವಾ

ಸಂಸಾರ ಸಾಗರದ ತೆರೆ ಕೊಬ್ಬಿ..." ಎಂಬುದು ೧೨ನೇ ಶತಮಾನದ ಸಾಮಾಜಿಕ ಕ್ರಾಂತಿಕಾರಿ ಮತ್ತು ಮಹಾನ್ ಶಿವಶರಣರಾದ ವಿಶ್ವ ಗುರು ಬಸವಣ್ಣನವರು ರಚಿಸಿರುವ ಅತ್ಯಂತ ಪ್ರಸಿದ್ಧವಾದ ವಚನವಾಗಿದೆ.

ಈ ವಚನದಲ್ಲಿ ಬಸವಣ್ಣನವರು ಲೌಕಿಕ ಜೀವನದ (ಸಂಸಾರದ) ಕಷ್ಟ-ಕಾರ್ಪಣ್ಯಗಳನ್ನು ಮತ್ತು ಅದರಿಂದ ಪಾರಾಗಲು ಭಕ್ತಿಯ ದಾರಿಯನ್ನು ಹೇಗೆ ಕಂಡುಕೊಳ್ಳಬೇಕು ಎಂಬುದನ್ನು ಸಮುದ್ರದ ಅಲೆಗಳ ರೂಪಕದ ಮೂಲಕ ಅದ್ಭುತವಾಗಿ ವರ್ಣಿಸಿದ್ದಾರೆ.

ಸಂಸಾರಸಾಗರದ ತೆರೆ ಕೊಬ್ಬಿ ಮುಖದ ಮೇಲೆ ಅಲೆವುತ್ತಲಿದೆ: ನಮ್ಮ ಈ ಲೌಕಿಕ ಜೀವನ ಅಥವಾ ಸಂಸಾರ ಎಂಬುದು ಒಂದು ದೊಡ್ಡ ಸಮುದ್ರವಿದ್ದಂತೆ. ಈ ಸಮುದ್ರದಲ್ಲಿ ಏಳುವ ಆಸೆ, ಆಕಾಂಕ್ಷೆ, ಕಷ್ಟ, ದುಃಖ ಮತ್ತು ಪ್ರಲೋಭನೆಗಳೆಂಬ ಅಲೆಗಳು ಮಿತಿಮೀರಿ (ಕೊಬ್ಬಿ) ಬಂದು ನಮ್ಮ ಮುಖಕ್ಕೆ ಅಪ್ಪಳಿಸುತ್ತಿವೆ. ಅಂದರೆ, ಮನುಷ್ಯನು ಲೌಕಿಕ ಬದುಕಿನ ಜಂಜಾಟಗಳಲ್ಲಿ ಸಂಪೂರ್ಣವಾಗಿ ಸಿಲುಕಿ ಒದ್ದಾಡುತ್ತಿದ್ದಾನೆ.

ಅದಕ್ಕೆ ಅಂಜುವೆ, ಎಂಜಲನೆಂಬೆ: ಈ ಸಂಸಾರದ ಮಾಯೆ ಮತ್ತು ಕಷ್ಟಗಳನ್ನು ನೋಡಿ ನನಗೆ ಭಯವಾಗುತ್ತಿದೆ (ಅಂಜುವೆ). ಈ ಲೌಕಿಕ ಸುಖಗಳು ಶಾಶ್ವತವಲ್ಲ, ಇವು ಎಂಜಲಿನಂತೆ ಅಪವಿತ್ರ ಮತ್ತು ಕ್ಷಣಿಕ ಎಂದು ನನಗೆ ಅರ್ಥವಾಗಿದೆ.

ಭವಭಂಗವ ಮಾಡಿ ಕಾಯೋ ಕೂಡಲಸಂಗಮದೇವಾ: ಎಲೈ ಕೂಡಲಸಂಗಮದೇವನೇ, ನನ್ನನ್ನು ಈ ಜನನ-ಮರಣಗಳ ಚಕ್ರದಿಂದ (ಭವಬಂಧನದಿಂದ) ಮುಕ್ತಗೊಳಿಸು. ಈ ಭವದ ದುಃಖಗಳನ್ನು ನಾಶಮಾಡಿ (ಭಂಗವ ಮಾಡಿ) ನನ್ನನ್ನು ಕಾಪಾಡು ಎಂದು ಬಸವಣ್ಣನವರು ದೇವರಲ್ಲಿ ಮೊರೆ ಇಡುತ್ತಾರೆ.

ಈ ವಚನದ ಆಳವಾದ ಆಧ್ಯಾತ್ಮಿಕ ತತ್ವವು ಇಂದಿಗೂ ಅನೇಕ ಜನರಿಗೆ ಮಾರ್ಗದರ್ಶಿಯಾಗಿದೆ. ಉತ್ತರ ಕರ್ನಾಟಕದ ಪ್ರಸಿದ್ಧ ಭಜನಾ ಶೈಲಿಯಲ್ಲಿ ಇಂತಹ ತತ್ವಗಳನ್ನು ಇಂದಿಗೂ ಹಾಡಲಾಗುತ್ತದೆ.ಈ ವಚನದ ಭಾವಕ್ಕೆ ಹತ್ತಿರವಿರುವ, ಸಂಸಾರದ ಮಾಯೆಯನ್ನು ವಿವರಿಸುವ ಸುಂದರವಾದ ಉತ್ತರ ಕರ್ನಾಟಕದ ಭಜನಾ ಪದವನ್ನು ನೀವು ಇಲ್ಲಿ ಕೇಳಬಹುದು ವಚನಗಳು ಮನುಕುಲದ ದಾರಿದೀಪ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ ಅಂತರಗಂಗಿ-ಸಿಂಧನೂರು. 998094144

ಕರುನಾಡ ದೇವತೆ ಭುವನೇಶ್ವರಿ



ಕರುನಾಡ ತಾಯಿ ಭುವನೇಶ್ವರಿ, ಸಲಹಮ್ಮ ನಮ್ಮನು ನಿರಂತರಿ,
ಕನ್ನಡದ ನೆಲದ ಸಿರಿ ಸಂಪದವ ಕಾಯುವ ಜನನಿ ನೀನೇ
ಜಗದೀಶ್ವರಿ! ॥ಪಲ್ಲವಿ॥

ಹಸಿರು ಸೀರೆಯ ಉಟ್ಟು ನಿಂತಿರುವ ಮಾತೆ,
ಕಾವೇರಿ ಕೃಷ್ಣೆಯ ಜಲಧಾರೆ ತಂದೆ,
ಚಂದನದ ಗಂಧವ ಸೂಸುವ ಮುಖದವಳೇ,
ಕನ್ನಡದ ಕೋಟಿಯ ದೀಪವೇ ನೀನೇ. ॥1॥

ಪಂಪ ರನ್ನರ ವಾಣಿಯಲಿ ಬೆಳಗಿದವಳೇ,
ಕುಮಾರವ್ಯಾಸನ ಕಾವ್ಯದಲಿ ನೆಲೆಸಿದವಳೇ,
ಜ್ಞಾನಪೀಠದ ಕಿರೀಟವ ಮುಡಿದವಳೇ,
ಅಮ್ಮ ನಿನ್ನ ನುಡಿಯೇ ನಮಗೆಲ್ಲ ಸಿಹಿಯೇ .॥2॥

ಶಿಲ್ಪಕಲೆಯ ಬೀಡು ಬೇಲೂರು ಹಳೇಬೀಡು,
ವಿಜಯನಗರದ ವೈಭವದ ತವರೂರು,
ಕಲ್ಲಲಿ ಕಲೆಯನು ಅರಳಿಸಿದ ತಾಯಿ,
ನಿನ್ನ ಮಡಿಲಲಿ ಹುಟ್ಟುವುದೇ ಒಂದು ವರವೇ. ॥3॥

ಎಲ್ಲೇ ಇರಲಿ ಹೇಗೆ ಇರಲಿ ಕನ್ನಡದ ಮನಸ್ಸು,
ನಿನ್ನ ಪೂಜಿಸುವುದೇ ನಮ್ಮಯ ಕನಸ್ಸು,
ಕನ್ನಡವೇ ಸತ್ಯ ಕನ್ನಡವೇ ನಿತ್ಯ,
ಎಂದು ಹಾಡುವೆವು ನಿನ್ನ ಕೀರ್ತಿಯ ಜಗತ್ತಿಗೆ. ॥4॥

ಬೀರಪ್ಪ ಶಂಭೋಜಿ ಸಿಂಧನೂರು

ದಿ. ಶರಣಪ್ಪ ಸಾಹುಕಾರ ಲಿಂಗದಹಳ್ಳಿ ಕುಟುಂಬದಿಂದ ಕಾರುಣ್ಯಾಶ್ರಮದಲ್ಲಿ ವಿಶೇಷ ಮಹಾಪ್ರಸಾದ ಸೇವೆ

❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಕುಷ್ಟಗಿ ತಾಲೂಕಿನ ಹಂಚಿನಾಳ ಗ್ರಾಮದ ದಿ.ಶರಣಪ್ಪ ಸಾಹುಕಾರ ಲಿಂಗದಹಳ್ಳಿ ಇವರ ಏಳನೇ ವರ್ಷದ ಪುಣ್ಯಾರಾಧನೆ ಸಮಾರಂಭ ಕಾರ್ಯಕ್ರಮ ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು

ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಪ್ರತಿ ವರ್ಷದ ಪದ್ಧತಿಯಂತೆ ಈ ವರ್ಷವೂ ಕೂಡ ಆಶ್ರಮದಲ್ಲಿ ವಿಶೇಷ ಮಹಾಪ್ರಸಾದ ಸೇವೆ ಹಾಗೂ ಹಣ್ಣು ಹಂಪಲುಗಳನ್ನು ವಿತರಿಸುವ ಮೂಲಕ ಹಂಚಿನಾಳ ಗ್ರಾಮದ ಲಿಂಗದಹಳ್ಳಿ ಸಾವುಕಾರ ಕುಟುಂಬದ ವತಿಯಿಂದ ದಿ. ಶರಣಪ್ಪ ಸಾಹುಕಾರ ಲಿಂಗದಹಳ್ಳಿ ಅವರ ಭಾವಚಿತ್ರಕ್ಕೆ ವಿಶೇಷ ಪೂಜೆಯನ್ನು ಸಲ್ಲಿಸುವ ಮೂಲಕ ಅರ್ಥಪೂರ್ಣವಾಗಿ ಕಾರ್ಯಕ್ರಮ ನೆರವೇರಿತು. ಈ ಕಾರ್ಯಕ್ರಮದಲ್ಲಿ ರುದ್ರಗೌಡ ಮಾಲಿಪಾಟೀಲ್ ಹಂಚಿನಾಳ ಇವರನ್ನು ಕಾರುಣ್ಯ ಆಶ್ರಮದ ವತಿಯಿಂದ ಗೌರವಿಸಿ ಸನ್ಮಾನಿಸಿದರು.



ಈ ಕಾರ್ಯಕ್ರಮದಲ್ಲಿ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಮಾತನಾಡಿ ಕುಷ್ಟಗಿ ತಾಲೂಕಿನ ಲಿಂಗದಹಳ್ಳಿ ಸಾಹುಕಾರ ಕುಟುಂಬವು ಹಲವಾರು ಸಮಾಜಪರ ಜನಪರ ಕಾರ್ಯಗಳನ್ನು ಮಾಡುತ್ತಾ ಸರ್ವ ಸಮಾಜದ ಪ್ರೀತಿ ಪ್ರೀತಿಗೆ ಪಾತ್ರವಾಗಿದೆ. ಹಂಚಿನಾಳ ಗ್ರಾಮದ ಲಿಂಗದಹಳ್ಳಿ ಸಾಹುಕಾರ ಕುಟುಂಬದ ಸೇವೆ ಕಾರುಣ್ಯಾಶ್ರಮಕ್ಕೆ ಅಪಾರವಾಗಿದೆ. ಸಾಮಾನ್ಯ ರೈತ ಕುಟುಂಬವಾದ ಲಿಂಗದಹಳ್ಳಿ ಸಾಹುಕಾರ ಕುಟುಂಬವು ಪ್ರತಿ ವರ್ಷ ದಿ.ಶರಣಪ್ಪ ಸಾಹುಕಾರ ಸವಿನೆನಪಿಗಾಗಿ ಹಲವಾರು ಕಾರ್ಯಗಳನ್ನು ರೂಪಿಸುತ್ತಾ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪರಿಸರ ಜಾಗೃತಿ ಮತ್ತು ನಮ್ಮಂತಹ ಅನಾಥ ಸಂಸ್ಥೆಗಳಿಗೆ ಸಹಾಯ ಸಹಕಾರ ಮಾಡುವುದರ ಮೂಲಕ ಹೆತ್ತವನ್ನು ಈ ರೀತಿ ಜನಪದ ಕಾರ್ಯಗಳ ಮೂಲಕ ಮರಿಸುವ ಈ ಕುಟುಂಬ ಸಮಾಜಕ್ಕೆ ಆದರ್ಶ ಈ ಕುಟುಂಬದ ಆದರ್ಶವನ್ನು ಹಲವಾರು ಯುವಕರು ಮೈಗೂಡಿಸಿಕೊಂಡು ಸಮಾಜಕ್ಕೆ ತಮ್ಮದೇ ಆದಂತಹ ಕೊಡುಗೆಗಳನ್ನು ನೀಡುತ್ತಿದ್ದಾರೆ.

ಕಾರುಣ್ಯ ಕುಟುಂಬಕ್ಕೆ ನಿರಂತರ ಸೌಜನ್ಯ ಮೂರ್ತಿಗಳಾದ ದಿ. ಶರಣಪ್ಪ ಸಾಹುಕಾರ ಲಿಂಗದಹಳ್ಳಿ ಅವರ ಆತ್ಮಕ್ಕೆ ಆ ಭಗವಂತ ನಿರಂತರ ಆತ್ಮ ಶಾಂತಿಯನ್ನು ಕರುಣಿಸಿ ಅವರ ಕುಟುಂಬಕ್ಕೆ ಮತ್ತು ನಮ್ಮೆಲ್ಲ-ರಿಗೆ ಅವರ ಅಗಲಿಕೆಯ ನೋವು ಭ-ರಿಸುವಂತಹ ಶಕ್ತಿಯನ್ನು ಆ ಭಗವಂತ ಕರುಣಿಸಲಿ ಎನ್ನುವ ವಿಶೇಷ ಪ್ರಾರ್ಥನೆ ಕಾರುಣ್ಯ ಕುಟುಂಬದಿಂದ ಮಾಡುವ ಮೂಲಕ ಆ ಕುಟುಂಬಕ್ಕೆ ಕರುಣೆಯ ಕಾರುಣ್ಯ ಕುಟುಂಬದ ವತಿಯಿಂದ ಹೃದಯಪೂರ್ವಕ ಹೃತ್ಪೂರ್ವಕ ಧನ್ಯವಾದಗಳು ಎಂದು ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ರುದ್ರಗೌಡ ಮಾಲಿ ಪಾಟೀಲ್ ಹಂಚಿನಾಳ. ಅಮರೇಶ ಮಾಲಿಪಾಟೀಲ್ ಹಂಚಿನಾಳ. ಶಿವಾನಂದ ಬಾವಿಕಟ್ಟಿ ಜುಮಲಾಪುರ. ಶಶಿಕಲಾ ದಿ.ಶರಣಪ್ಪ ಸಾಹುಕಾರ ಲಿಂಗದಹಳ್ಳಿ. ನಿವೇದಿತಾ ಲಿಂಗರಾಜ ಸಾಹುಕಾರ ಲಿಂಗದಹಳ್ಳಿ. ಲಕ್ಷ್ಮಿ ಮಲ್ಲಿಕಾರ್ಜುನ ಸಾಹುಕಾರ ಲಿಂಗದಹಳ್ಳಿ. ಹಾಗೂ ಆಶ್ರಮದ ಸದಸ್ಯರಾದ ಸುಜಾತ ಹಿರೇಮಠ. ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ. ಮರಿಯಪ್ಪ ವಿದ್ಯಾಶ್ರೀ. ಶಂಕ್ರಮ್ಮ ಶರಣು ಸ್ವಾಮಿ. ಬಸವಸ್ವಾಮಿ. ಹಾಗೂ ಹಂಚಿನಾಳ ಗ್ರಾಮದ ಲಿಂಗದಹಳ್ಳಿ ಸಾಹುಕಾರರ ಕುಟುಂಬದ ಅನೇಕರು ಉಪಸ್ಥಿತರಿದ್ದರು.

ಕಂಪ್ಲಿಯಲ್ಲಿ ವಿಶ್ವಕರ್ಮೋತ್ಸವ: ಭವ್ಯ ಮೆರವಣಿಗೆ, ಸಮುದಾಯ ಭವನ ಲೋಕಾರ್ಪಣೆ

❏ ನೈಜ್ಯ ದೆಸೆ ನ್ಯೂಸ್

ಕಂಪ್ಲಿ: ಪಟ್ಟಣದ ಕೊಟ್ಟಾಲ್ ರಸ್ತೆಯ ಸತ್ಯನಾರಾಯಣ ದೇವಸ್ಥಾನದಿಂದ ಕಾಳಿಕಾ ಕಮತೇಶ್ವರ ದೇವಸ್ಥಾನದವರೆಗೆ ಹಮ್ಮಿಕೊಳ್ಳಲಾಗಿದ್ದ ವಿಶ್ವಕರ್ಮ ಭಾವಚಿತ್ರ ಹಾಗೂ ಪೂಜ್ಯ ಶ್ರೀಗಳ ಭವ್ಯ ಮೆರವಣಿಗೆಯು ಶುಕ್ರವಾರ ಅತ್ಯಂತ ಶ್ರದ್ಧಾಭಕ್ತಿಯಿಂದ ಜರುಗಿತು. ವಿಶ್ವಕರ್ಮ ಸಮಾಜದ ನೂತನ ಸಮುದಾಯ ಭವನ ಹಾಗೂ ಶ್ರೀ ಡಿ.ವೀರಪ್ಪ ಆಚಾರ್ ಕಲ್ಯಾಣ ವೇದಿಕೆಯ ಉದ್ಘಾಟನಾ ಸಮಾರಂಭದ ಅಂಗವಾಗಿ ಈ ಧಾರ್ಮಿಕ ಮತ್ತು ಸಾಂಸ್ಕೃತಿಕ ವೈಭವದ ಮೆರವಣಿಗೆಯನ್ನು ಆಯೋಜಿಸಲಾಗಿತ್ತು.

ಮಾರ್ಗದುದ್ದಕ್ಕೂ ಭಕ್ತಿ ಸಡಗರ: ಸತ್ಯನಾರಾಯಣ ದೇವಸ್ಥಾನದಿಂದ ಆರಂಭವಾದ ಮೆರವಣಿಗೆಯು ಮಹಾತ್ಮಗಾಂಧಿ ವೃತ್ತ, ಅಂಬೇಡ್ಕರ್ ವೃತ್ತ, ಗ್ರಾಮ ದೇವತೆ ಮಾರೆಮ್ಮ ದೇವಸ್ಥಾನ, ನಡುವಲ ಮಸೀದಿ ಹಾಗೂ ಗಂಗಾನಗರದ ಪ್ರಮುಖ ರಸ್ತೆಗಳ ಮೂಲಕ ಸಾಗಿ ಕಾಳಿಕಾ ಕಮತೇಶ್ವರ ದೇವಸ್ಥಾನದಲ್ಲಿ ಸಂಪನ್ನಗೊಂಡಿತು. ಮೆರವಣಿಗೆಯ ಸಾಗುವ ಹಾದಿಯಲ್ಲಿ ಸಮಾಜದ ಬಂಧುಗಳು ಭಕ್ತಿಯಿಂದ ಶ್ರೀಗಳಿಗೆ ಹಾಗೂ ವಿಶ್ವಕರ್ಮ ಭಾವಚಿತ್ರಕ್ಕೆ ನಮಿಸಿದರು. ಮುಂಜಾನೆ ವಿಶ್ವಕರ್ಮ ಧ್ವಜಾರೋಹಣ, ಚಂಡಿಕಾ ಯಾಗ ಹಾಗೂ ಪೂರ್ಣಾಹುತಿ ಸೇರಿದಂತೆ ವಿವಿಧ ಧಾರ್ಮಿಕ ವಿಧಿವಿಧಾನಗಳು ಶಾಸ್ತ್ರೋಕ್ತವಾಗಿ ನೆರವೇರಿದವು.

ದಿವ್ಯ ಸಾನಿಧ್ಯ ಹಾಗೂ ಉದ್ಘಾಟನೆ: ವಿಶ್ವಕರ್ಮ ಪೀಠದ ಪರಮಪೂಜ್ಯ ಸುಜ್ಞಾನತೀರ್ಥ ಮಹಾಸ್ವಾಮಿಗಳು ಹಾಗೂ ಆನೆಗುಂದಿಯ ಪಂಚ ಸಿಂಹಾಸನ ಸರಸ್ವತಿ ಪೀಠದ ಕಾಳ ಹಸ್ತೇಂದ್ರ ಮಹಾಸ್ವಾಮಿಗಳು ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದರು. ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಸುಜ್ಞಾನ ಮೂರ್ತಿ ಪಿ ಅವರು ನೂತನ ಸಮುದಾಯ ಭವನವನ್ನು ಉದ್ಘಾಟಿಸಿ ಶುಭ ಕೋರಿದರು.

ಕಂಪ್ಲಿ ವಿಶ್ವಕರ್ಮ ಸಮಾಜದ ಅಧ್ಯಕ್ಷ ಡಿ.ರುದ್ರಪ್ಪ ಆಚ-ಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಕರ್ನಾಟಕ ವಿಶ್ವಕರ್ಮ ಸಮಾಜದ ರಾಜ್ಯಾಧ್ಯಕ್ಷ ಮಂಟೇ ಲಿಂಗಾಚಾರ್, ವಿಜಯನಗರ ಜಿಲ್ಲಾಧ್ಯಕ್ಷ ಸಿ.ರಾಜಣ್ಣ, ಕೊಪ್ಪಳ ಜಿಲ್ಲಾಧ್ಯಕ್ಷ ವಾಗೇಶ್ ಕುಮಾರ, ಸಮಾಜದ ಮಹಿಳಾ ಘಟಕದ ಅಧ್ಯಕ್ಷೆ ಡಿ.ವೀಣಾ, ಉಪಾಧ್ಯಕ್ಷ ಚಂದ್ರಶೇಖರ ಆಚ-ಾರ್, ಪ್ರಧಾನ ಕಾರ್ಯದರ್ಶಿ ಡಿ.ಮೌನೇಶ್, ಕರ್ನಾಟಕ ಮಹಿಳಾ ಮಂಡಳಿ ಅಧ್ಯಕ್ಷೆ ಶೋಭಾ, ಮುಖಂಡರಾದ ಡಿ.ರಾಘವೇಂದ್ರ ಆಚಾರ್, ಉಮಾದೇವಿ ಹೊಸಪೇಟೆ ಸೇ-ರಿದಂತೆ ನೂರಾರು ಭಕ್ತರು ಹಾಗೂ ಸಮಾಜದ ಪ್ರಮುಖರು ಉಪಸ್ಥಿತರಿದ್ದರು.



ಎಮ್ಮಿಗನೂರಲ್ಲಿ ಬಿಡಾಡಿ ದನಗಳ ಅರಾಜಕತೆ : ಅಂಗಡಿ-ಮುಂಗಟ್ಟುಗಳಿಗೆ ಲಗ್ಗೆ, ಪಾದಚಾರಿಗಳು ಹೈರಾಣ

❏ ನೈಜ್ಯ ದೆಸೆ ನ್ಯೂಸ್

ಕಂಪ್ಲಿ: ತಾಲೂಕಿನ ಎಮ್ಮಿಗನೂರ ಗ್ರಾಮದ ಪ್ರಮುಖ ರಸ್ತೆಯಲ್ಲಿ ಬಿಡಾಡಿ ದನಗಳ ಹಾವಳಿ ದಿನೇ ದಿನೇ ಹೆಚ್ಚುತ್ತಿದೆ. ರಸ್ತೆಯಲ್ಲಿ ಅಡ್ಡಾದಿಡ್ಡಿ ಸಂಚರಿಸಿ, ಠಿಕಾಣಿ ಹೂಡುತ್ತಿವೆ. ಇನ್ನೂ ಮನಬಂದಂತೆ ಅಂಗಡಿ-ಮುಂಗಟ್ಟು ಹಾಗೂ ಜನರು ಕುಳಿತಕಡೆ ನುಗ್ಗಿ, ವಾಹನ ಸವಾರರಿಗೆ ಕಿರಿಕಿರಿ ಮಾಡುವ ಬಿಡಾಡಿ ದನಗಳ ಉಪಟಳಕ್ಕೆ

> ಬಿಡಾಡಿ ದನಗಳಿಂದ ಜನರಿಗೆ ತೊಂದರೆಯಾಗುತ್ತಿದೆ. ಗ್ರಾಮ ಪಂಚಾಯಿತಿಯವರು ದನಗಳನ್ನು ನಿಯಂತ್ರಿಸಲು ಸೂಕ್ತ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಸಾರ್ವಜನಿಕರು ಸಮಸ್ಯೆ ಅನುಭವಿಸುವುದು ಗ್ಯಾರಂಟಿ.
> ಎಳ್ಳರ್ತಿ ರಾಘವೇಂದ್ರ ರೆಡ್ಡಿ, ಎಮ್ಮಿಗನೂರು

ಸಾರ್ವಜನಿಕರು ಬೇಸತ್ತು ಹೋಗಿದ್ದಾರೆ. ಆದ-ರೂ ಅಧಿಕಾರಿಗಳು ಮಾತ್ರ ಕಣ್ಣಿದ್ದು ಕುರುಡರಂತೆ ನಿರಾಸಕ್ತಿ ವಹಿಸಿರುವುದು ಬಹುದೊಡ್ಡ ದುರಂತ.

ಬಿಡಾಡಿ ದನಕರಗಳ ಉಪಟಳಕ್ಕೆ ಕಡಿವಾಣ ಹಾಕಿ ಎಂದು ಸಾರ್ವಜನಿಕರು ಈಗಾಗಲೇ ಆನೇಕ ಬಾರಿ ಗ್ರಾಪಂ. ಆಡಳಿತಕ್ಕೆ ಮನವಿ ನೀಡಿದರೂ ಕ್ಯಾರೇ ಎನ್ನದ ಅಧಿಕಾ-ರಿಗಳು ಸಂಪೂರ್ಣ ನಿರ್ಲಕ್ಷ್ಯ ತೋ-ರಿದ್ದಾರೆ ಎಂಬ ಆರೋಪ ಗ್ರಾಮಸ್ಥರದ್ದಾಗಿದೆ. ರಸ್ತೆ ಮಧ್ಯೆ ಬೀಡುಬಿಡುವುದು, ಗುಂಪು ಗುಂಪಾಗಿ ದನಕರಗಳು ಮಲಗುವುದರಿಂದ ವಾಹನ ಸಂಚಾರಕ್ಕೆ ಅಡಚಣೆ ಆಗುತ್ತಿದೆ. ಇನ್ನು ಬೈಕ್ ಸವಾರರ ಮೇಲೆ ದಾಳಿಗಿಳಿದ ಘಟನೆಗಳು ನಡೆದಿ



> ಗ್ರಾಮದಲ್ಲಿ ಈಗಾಗಲೇ ಮೈಕ್ ಮೂಲಕ ದನಕರಗಳ ಮಾಲಿಕರಿಗೆ ಸೂಚನೆ ನೀಡಿದೆ, ಒಂದು ವಾರ ಗಡುವು ನೀಡಿದೆ, ಮಾಲಿಕರು ರಸ್ತೆಯಲ್ಲಿ ದನಕರಗಳನ್ನು ಬಿಡದಂತೆ ಜಾಗೃತಿ ವಹಿಸಬೇಕು, ಇಲ್ಲದಿದ್ದರೆ ಗೋಶಾಲೆಗೆ ಕಳುಹಿಸುತ್ತೇವೆ ಜೊತೆಗೆ ಸೂಕ್ತಕ್ರಮ ವಹಿಸುತ್ತೇವೆ."
> ಹಾಲರವಿ ಶೇಷಗಿರಿ, ಪಿಡಿಓ, ಗ್ರಾ.ಪಂ., ಎಮ್ಮಿಗನೂರು.

> ಈ ರಸ್ತೆ ಮಾರ್ಗದಲ್ಲಿ ವಾಹನ ಚಲಾಯಿಸಲು ಸಮಸ್ಯೆ ಎದುರಿಸುವಂತಾಗಿದೆ. ಗಾಡಿಗಳು ಬರುತ್ತಿದ್ದಂತೆ ದನಗಳು ನುಗ್ಗುತ್ತವೆ. ಬೈಕ್ ಸವಾರ-ರಿಗೆ ಗುದ್ದಿದ ಉದಾಹರಣೆಗಳಿವೆ. ಇದರಿಂದ ಪದೇ ಪದೇ ಅಪಘಾತಗಳು ನಡೆಯುತ್ತಿವೆ. ಹಾಗಾಗಿ ಕೂಡಲೇ ಗ್ರಾ.ಪಂ.ನವರು ಕ್ರಮಕ್ಕೆ ಮುಂದಾಗಬೇಕು.
> ಜಡೇಶ, ವಾಹನ ಸವಾರ, ಎಮ್ಮಿಗನೂರು.

ಮಾನವೀಯತೆಯೇ ನಮ್ಮ ನಿಜವಾದ ಧರ್ಮವಾಗಬೇಕು – ಮುರುಘೇಂದ್ರ ಶ್ರೀ

❏ ನೈಜ್ಯ ದೆಸೆ ನ್ಯೂಸ್

ಲಿಂಗಸಗುರು: ಧರ್ಮ ಎನ್ನುವುದು ಅಮೃತವಿದ್ದಂತೆ ; ಜಾತಿ-ಮತಗಳ ಗಡಿ ಮೀರಿ ಮಾನವೀಯತೆಯೇ ನಮ್ಮ ನಿಜವಾದ ಧರ್ಮವಾಗಬೇಕು ಎಂದು ಯರಡೋಣ ಶ್ರೀ ಸಿದ್ದಾರಾಮೇಶ್ವರ ಗುರುಮಠದ ಪೂಜ್ಯ ಶ್ರೀ ಮುರುಘೇಂದ್ರ ಶಿವಯೋಗಿಗಳು ಹೇಳಿದರು.

ಪಟ್ಟಣದ ವಿಜಯ ಮಹಾಂತೇಶ್ವರ ಮಠದಲ್ಲಿ ಜಿಲ್ಲಾ ಜಮೀಯತ್ ಉಲಮಾ ವತಿಯಿಂದ ಹಮ್ಮಿಕೊಂಡಿದ್ದ 'ಸರ್ವಧರ್ಮ ಭಾವೈಕ್ಯ ಸಮಾವೇಶ'ದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು . ಸ್ವಾಮಿ ವಿವೇಕಾನಂದರ ಕಾಲದಿಂದಲೂ ನಮ್ಮ ದೇಶದಲ್ಲಿ ಸರ್ವಧರ್ಮಗಳು ಒಂದೇ ಎಂಬ ಭಾವನೆಯೊಂದಿಗೆ ಮುಂದುವ-ರಿದುಕೊಂಡು ಬಂದಿವೆ. ಬಸವಣ್ಣನವರು ಹನ್ನೆರಡನೇ ಶತಮಾನದಲ್ಲೇ ವಚನಗಳ ಮೂಲಕ ಸಪ್ತಸೂತ್ರಗಳನ್ನು ನೀಡಿದ್ದಾರೆ. ಹಾಗೆಯೇ ವೇದಗಳಲ್ಲೂ ಧರ್ಮವನ್ನು ದುಃಖವನ್ನು ಶಮನಗೊಳಿಸುವ ಅಮೃತಕ್ಕೆ ಹೋಲಿಸಲಾಗಿದೆ. ಅಹಿಂಸೆ, ಸತ್ಯ, ಕಳ್ಳತನ ಮಾಡದಿರುವುದು, ದಯಾಗುಣ, ದಾನ ಹಾಗೂ ಧ್ಯಾನ ಇವು ಧರ್ಮದ ಹತ್ತು ಸೂತ್ರಗಳಾಗಿವೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಬದುಕು ಸಾರ್ಥಕವಾಗುತ್ತದೆ.ನಮ್ಮ



ಮುಗುಳ್ಕೋಡ ಮಠದ ಪರಂಪರೆಯಲ್ಲಿ ಜಾತಿ, ಮತ, ಪಂಥಗಳಿಗೆ ಅವಕಾಶವಿಲ್ಲ.

ಜಗತ್ತಿನ ಎಲ್ಲರನ್ನೂ 'ಇದು ನಮ್ಮದು' ಎಂಬ ಭಾವನೆಯಿಂದ ಕಾಣಲಾಗುತ್ತದೆ. ಲಿಂಗಸಗು-ರಿನಲ್ಲಿ ನಿವೃತ್ತರಾಗಿದ್ದ ಖಾಜಾ ಮೈನುದ್ದೀನ್ ಮಾಸ್ಟರ್ ಅವರು ಯಲ್ಲಾಲಿಂಗ ಮಹಾರಾಜರ ಆಶೀರ್ವಾದ ಪಡೆದಿದ್ದರು. ತಮ್ಮ ಹುಟ್ಟಿನಿಂದ ಹಿಡಿದು ಕೊನೆಯ ತನಕವೂ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು ಬದುಕಿದ ಅವರು ನಮ್ಮ ಪರಂಪರೆಗೆ ಹತ್ತಿರವಾಗಿದ್ದವರು. ಮಠದ ಪ್ರವೇಶದ್ವಾರದಲ್ಲೇ ದರ್ಗಾ ಇರುವುದು ನಮ್ಮ ಧರ್ಮಗಳ ಐಕ್ಯತೆಗೆ ಸಾಕ್ಷಿಯಾಗಿದೆ. ನಮ್ಮ ಭಾರತ ದೇಶ ವಿವಿಧತೆಗಳಿಂದ ಕೂಡಿದ ಶಾಂತಿಯ ತೋಟವಾಗಿದೆ. ಇಲ್ಲಿ ಗಿಡಗಳನ್ನು ಪೂಜಿಸುವುದರಿಂದ ಹಿಡಿದು ದಾರಿಯ ಕಲ್ಲಿಗೂ ನಮಸ್ಕರಿಸುವವರೆಗೆ ಪ್ರಕೃತಿಯನ್ನು ಆರಾಧಿಸುವ ಸ್ವಾತಂತ್ರ್ಯವಿದೆ. ದಾನ, ಧ್ಯಾನ, ನಮಾಜ್, ಪ್ರಾಥ-ರ್ನೆ ಅಥವಾ ಯೋಗ ಹೀಗೆ ಯಾವ ಮಾರ್ಗದ ಮೂಲಕವಾದರೂ ದೇವರನ್ನು ಕಾಣಬಹುದು. ಆದರೆ ಅಂತಿಮವಾಗಿ ಪ್ರತಿಯೊಬ್ಬರೂ ಮಾನವೀಯ ಗುಣಗಳನ್ನು ಬೆಳೆಸಿಕೊಳ್ಳುವುದು ಅತ್ಯಂತ ಮುಖ್ಯ ಎಂದು ತಿಳಿಸಿದರು .

ನಂತರ ಮಾತನಾಡಿದ ಲೂರ್ದುಮಠ ಚರ್ಚ್‌ನ ಫಾ. ಜೋಸ್ ಪ್ರಕಾಶ್ ಧರ್ಮಕ್ಕಿಂತ ಮಾನವೀಯತೆ ದೊಡ್ಡದು; ವೈವಿಧ್ಯತೆಯೇ ಸಮಾಜದ ನಿಜವಾದ ಸೌಂದರ್ಯ" ಎಂದು ಅವರು ಹೇಳಿದರು. ಸಮಾಜದಲ್ಲಿ ಧಾರ್ಮಿಕ ಸಾಮರಸ್ಯ ಮತ್ತು ಮಾನವೀಯ ಮೌಲ್ಯಗಳ ಕುರಿತು ಆಳವಾದ ಚಿಂತನೆಗಳನ್ನು ಹಂಚಿಕೊಂಡರು. "ನನ್ನ ಧರ್ಮವೇ ಶ್ರೇಷ್ಠ, ಉಳಿದವರ ನಂಬಿಕೆಗಳು ತಪ್ಪು" ಎಂಬ ಮನೋಭಾವವನ್ನು ಮೊದಲು ಬಿಡಬೇಕು. ಪ್ರತಿಯೊಬ್ಬರಿಗೂ ಅವರವರ ಧರ್ಮವನ್ನು ಅನುಸರಿಸುವ ಸ್ವಾತಂತ್ರ್ಯವಿದೆ. ಉದ್ಯಾನವನದಲ್ಲಿ ವಿವಿಧ ಬಣ್ಣಗಳ ಹೂವುಗಳು ಅರಳಿ ಸೌಂದರ್ಯ ಹೆಚ್ಚಿಸುವಂತೆ, ವಿವಿಧ ಧರ್ಮ ಹಾಗೂ ಸಂಸ್ಕೃತಿಗಳು ಸಮಾಜದ ಅಂದವನ್ನು ಹೆಚ್ಚಿಸುತ್ತವೆ. ವೈವಿಧ್ಯತೆ ನಮ್ಮ ಶಕ್ತಿ, ಏಕತೆ ನಮ್ಮ ಸೌಂದರ್ಯ ಎಂದು ಫಾ. ಜೋಸ್ ಪ್ರಕಾಶ್ ತಿಳಿಸಿದರು. ಹಿಂದೂ, ಇಸ್ಲಾಂ, ಕ್ರೈಸ್ತ, ಬೌದ್ಧ, ಜೈನ ಹಾಗೂ ಸಿಖ್ ಧರ್ಮ ಸೇರಿದಂತೆ ಎಲ್ಲ ಧರ್ಮಗಳ ಇತಿಹಾಸ ಮತ್ತು ಆಚರಣೆಗಳು ಬೇರೆಯಾಗಿದ್ದರೂ, ಅವುಗಳ ಮೂಲ ಸಂದೇಶ ಪ್ರೀತಿ, ಕರುಣೆ, ಸತ್ಯ ಮತ್ತು ಶಾಂತಿಯಾಗಿದೆ.

ಹಿಂದೂ ಧರ್ಮ ಅಹಿಂಸೆ ಮತ್ತು ಲೋಕ ಕಲ್ಯಾಣವನ್ನು ಸಾರಿದರೆ, ಇಸ್ಲಾಂ ಧರ್ಮ ಕರುಣೆ ಹಾಗೂ ನ್ಯಾಯವನ್ನು ಬೋಧಿಸುತ್ತದೆ. ಹಾಗೆಯೇ ಕ್ರೈಸ್ತ ಧರ್ಮ ನೊಂದವರ ಸೇವೆಯನ್ನು, ಬೌದ್ಧ ಧರ್ಮ ದಯೆಯನ್ನು ಮತ್ತು ಸಿಖ್ ಧರ್ಮ ಸಮಾನತೆಯನ್ನು ಕಲಿಸಿಕೊಡುತ್ತದೆ ಎಂದು ಅವರು ವಿವರಿಸಿದರು. ಸಮಾಜದಲ್ಲಿ ಭಿನ್ನಾಭಿಪ್ರಾಯಗಳು ಇರುವುದು ಸಹಜ. ಒಬ್ಬರ ಪ್ರಾರ್ಥನಾ ವಿಧಾನ ಅಥವಾ ಹಬ್ಬದ ಆಚರಣೆ ಮತ್ತೊಬ್ಬರಿಗಿಂತ ಭಿನ್ನವಾಗಿರಬಹುದು. ಆದರೆ ಈ ವ್ಯತ್ಯಾಸಗಳು ನಮ್ಮ ನಡುವೆ ಗೋಡೆಗಳನ್ನು ನಿರ್ಮಿಸದೆ, ಪರಸ್ಪರ ಅರಿಯುವ ಸೇತುವೆಯಾಗಬೇಕು. ನಮ್ಮ ನಂಬಿಕೆ ನಮಗೆ ಎಷ್ಟು ಮುಖ್ಯವೋ, ಇತರರ ನಂಬಿಕೆಯೂ ಅವರಿಗೆ ಅಷ್ಟೇ ಮುಖ್ಯ ಎಂಬುದನ್ನು ಪ್ರತಿಯೊಬ್ಬರೂ ಅರಿಯಬೇಕು. ಧರ್ಮದ ಹೆಸರಿನಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಹರಡುತ್ತಿರುವ ದ್ವೇಷದ ಸಂದೇಶಗಳು ಹಾಗೂ ಸುಳ್ಳು ಸುದ್ದಿಗಳನ್ನು ಯಾರೂ ಪರಿಶೀಲಿಸದೆ ಹಂಚಿಕೊಳ್ಳಬಾರದು ಎಂದು ಅವರು ಎಚ್ಚರಿಸಿದರು.

ಈ ಸಂದರ್ಭದಲ್ಲಿ ವಿಜಯ ಮಹಾಂತೇಶ ಸನ್ನಿಧಿ ಶಾಖಾ ಮಠದ ಪೂಜ್ಯಶ್ರೀ ಸಿದ್ದಲಿ0ಗ ಸ್ವಾಮಿಗಳು, ಜಮೀಯತ್ ಉಲಮಾ ಜಿಲ್ಲಾಧ್ಯಕ್ಷರಾದ ಮುಫಿ ಸೈಯದ್ ಯೂನುಸ್ ಖಾಸ್ಮಿ, ಮೌಲಾನಾ ಮೊಹಮ್ಮದ್ ಸಿರಾಜುದ್ದೀನ್ ಸಾಹಬ್ ಖಾಸ್ಮಿ, ಮುಸ್ಲಿ ಸೈಯದ್ ಹಸನ್ ಝೀಶಾನ್ ಸಾಹಬ್ ಖಾಸ್ಮಿ, ಸಮಿಯಲ್ಲಾ ಸಾಹಬ್ ಸ.ಹ. ಶಿಕ್ಷಕರು, ಮೌಲಾನಾ ಸೈಯದ್ ಖೈಸರ್ ಸಾಹಬ್ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಪಟ್ಟಣದ ವಿವಿಧ ಸಮಾಜದ ಮುಖಂಡರು ಭಾಗವಹಿಸಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101